೧೯೩೦ ಸಂಪುಟ ೮

ಮಾರ್ಚಿ ಕುಸುಮ ೧೦೧

ವಂದೇ ಕರ್ನಾಟಕ ಮಾತರಂ

ಸುಬೋಧ

ಪುಷ್ಪಾಂಜಲಿ ಗ್ರಂಥಮಾಲಾ

ಬೆಂಗಳೂರು

(ಸಚಿತ್ರ ಮಾಸ ಪುಸ್ತಕಾವಳಿ)

ಹಿ. ಹೈ. ಮಾತೃಶ್ರೀ ಮೈಸೂರು ಮಹಾರಾಣಿ

ಲಕ್ಷ್ಮಮ್ಮಣ್ಣಿಯವರು

ಸಂಪಾದಕ—ಯಂ. ರಾಮರಾವ್.

ಸುಬೋಧ ಪ್ರಕಟನಾಲಯ

ಬೆಂಗಳೂರು ನಗರ

ವಾ. ಚಂ. ೧-೮-೦] [ಬೆಲೆ ೦—೨—೦

Sri. Narasimhaiyengar
Siak Forum

ಶ್ರೀರಾಮ ಸಹಾಯಂ

ಸುಬೋಧ ಕುಸುಮಾಂಜಲಿ ಗ್ರಂಥಮಾಲಾ

(ಸಚಿತ್ರ ಮಾಸ ಪುಸ್ತಕಾವಳಿ)

ಮುನ್ನುಡಿ :—

ಭರತಖಂಡದ ಆಶ್ರಿತ ಸಂಸ್ಥಾನಗಳಲ್ಲಿ ಮಕುಟಮಣಿ ಸ್ವರೂಪದಿಂದ ವಿರಾಜಿಸುತ್ತಿರುವ ನಮ್ಮ ಮೈಸೂರು ಸಂಸ್ಥಾನಕ್ಕೆ ಕ್ರಿಸ್ತ ಶಕದ ಹದಿನೆಂಟನೆಯ ಶತಮಾನದಲ್ಲಿ ಪ್ರಾಪ್ತವಾಗಿದ್ದ ದುರಂತ ಸಂಕಟದಿಂದ ಅದನ್ನು ರಕ್ಷಿಸಿ, ಆರ್ಷೇಯ ರಾಜವಂಶವನ್ನು ಪುನಃ ಜೀರ್ಣೋದ್ಧಾರಗೊಳಿಸಿದ ಮಹತ್ಕೀರ್ತಿಯು ನಮ್ಮ ಪ್ರಕೃತ ಕಥಾನಾಯಿಕೆಯಾದ ಮಹಾ ಮಾತೃ ಶ್ರೀ ಲಕ್ಷ್ಮಮ್ಮಣ್ಣಿಯವರಿಗೆ ಸೇರತಕ್ಕದು. ಯದುರಾಯರೇ ಮುಂತಾದ ನರಕೇಸರಿಗಳಿಂದ ವಿಭೂಷಿತವಾಗಿದ್ದ ಮೈಸೂರಿನ ರಾಜಪೀಠವು, ಪರಾಕ್ರಾಂತವಾಗಿ ಅಳಿಸಿಹೋಗುವುದೋ ಎಂಬಂತಹ ದುರಂತ ಸಂಕಟಕ್ಕೀಡಾಗಿದ್ದ ಆ ಕಾಲದಲ್ಲಿ, ಮಹಾರಾಣಿ ಲಕ್ಷ್ಮಮ್ಮಣ್ಣಿಯವರು, ರಾಜವಂಶಕ್ಕೆ ಭಾಗ್ಯದೇವತೆಯೋ ಎಂಬಂತೆ ರಕ್ಷಕರಾಗಿ ಅದನ್ನು ತಮ್ಮ ಸಾಹಸದಿಂದ ಜೀರ್ಣೋದ್ಧಾರಗೊಳಿಸದಿದ್ದರೆ, ಇಂದಿನ ಮೈಸೂರು ಸಂಸ್ಥಾನದ ಸ್ಥಿತಿಯೂ ಆರ್ಷೇಯ ರಾಜವಂಶದ ಸ್ಥಿತಿಯೂ ಹೇಗಿರುತ್ತಿದ್ದುವೆಂದು ಹೇಳಲು ಸಾಧ್ಯವಿಲ್ಲ. ಜೀವನಕ್ಕೂ ಮಾರ್ಗಕಾಣದೆ ನರಿಗಳಂತೆ ರಾಜಾಶ್ರಯದಲ್ಲಿ ಬಂದು ಸೇರಿದ ಸೇವಕರು, ಕಿರಬಗಳಂತೆ ಪ್ರಬಲಿಸಿ, ಸ್ವಾಮಿದ್ರೋಹಿಗಳಾಗಿ ಉಂಡಮನೆಗೆ ಎರಡು ಬಗೆಯಲೆಣಿಸಿದ ಕೃತಘ್ನತೆಯ ಪರಿಣಾಮದಿಂದ - ನಾಶವಾಗದಂತೆ ಈ ಚಂದ್ರವಂಶಾಂಕುರವನ್ನು ರಕ್ಷಿಸಿ - ಅಭಿವೃದ್ಧಿಗೊಳಿಸಿದ ಈ ಪುಣ್ಯವತಿಯ ನಾಮವು, ಮೈಸೂರ್ರಾಜವಂಶದಲ್ಲಿ ಸುವರ್ಣಾಕ್ಷರಗಳಿಂದ ಕೆತ್ತಲ್ಪಟ್ಟು ಪ್ರಾತಃಸ್ಮರಣೀಯವಾಗಿರಲು ಅರ್ಹವಾಗಿದೆ.



ನಮ್ಮ ಕಥಾನಾಯಿಕೆಯ ಕಾಲದಲ್ಲಿ ರಾಜ್ಯಾಕ್ರಮಣ ಮಾಡಿದ ಹೈದರಾಲಿ, ಟೀಪೂಸುಲ್ತಾನರು ವಂಶ ಪಾರಂಪರ್ಯವಾಗಿ ರಾಜ್ಯಾಧಿಕಾರಿಗಳೇ ಆಗಿದ್ದವರಲ್ಲ-ಅಥವ ರಾಜವಂಶೀಕರೂ ಅಲ್ಲ. ಆದರೂ, ಹೈದರಾಲಿಯು ತನ್ನ ಧೈರ್ಯ ಸಾಹಸಗಳಿಂದಲೂ, ಏಕನಿಷ್ಠೆ ಕುಶಲಮತಿ ಪ್ರಭುಶಕ್ತಿ-ದರ್ಪಗಳಿಂದಲೂ, ಕೇವಲ ಕ್ಷುದ್ರ ಸೇವಕಾವೃತ್ತಿಯಿಂದ ಕ್ರಮ ಕ್ರಮವಾಗಿ ಮೇಲಕ್ಕೇರುತ್ತ ಏರುತ್ತ, ಅಧಿಕಾರಿ ವರ್ಗದಲ್ಲಿ ಅಗ್ರಸ್ಥಾನವನ್ನು ಆಕ್ರಮಿಸಿ, ಲಕ್ಷಾಂತರ ಸೈನ್ಯಗಳಿಗೆ ಅಧೀಶನಾಗಿ, ಕೋಟ್ಯಾಂತರ ದ್ರವ್ಯಕ್ಕೆ ಸ್ವಾಮಿಯಾಗಿ, ರಾಜರನ್ನು ಮೂಲೆಗೊತ್ತಿ ತಾನೇ ನವಾಬನೆಂದು ಹೇಳಿಸಿಕೊಂಡನು. ಈತನ ಕಾಲದಲ್ಲಿ ಮೈಸೂರು ರಾಜವಂಶಕ್ಕೆ ರಾಜ್ಯಾಧಿಪತ್ಯವು ತಪ್ಪಿದ್ದಿತಾದರೂ, ಅವರು ನಿರ್ಬಂಧಕ್ಕೆ ಸಿಕ್ಕ ಅನ್ನವಸ್ತ್ರಗಳಿಗೂ ತಾಪತ್ರಯ ಪಡುವಂತಹ ದುಸ್ಥಿತಿಯು ಪ್ರಾಪ್ತವಾಗಿರಲಿಲ್ಲ. ಆದರೆ, ಈತನ ಮಗನಾದ ಟಿಪ್ಪೂಸುಲ್ತಾನನು ರಾಜ್ಯಾಧಿಪತ್ಯವನ್ನು ಕೈಕೊಂಡ ಮೇಲೆ, ರಾಜವಂಶೀಕರ ಸ್ಥಿತಿಯು ಬಹು ಶೋಚನೀಯಾವಸ್ಥೆಗಿಳಿಯಿತು. ಆಗಿನ ಆ ಸಂಕಟ ಕಾಲದಲ್ಲಿ ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಅಪೂರ್ವ ಧೈರ್ಯ ಸಾಹಸಗಳನ್ನು ಪ್ರಕಟಿಸಿ, ಗುಪ್ತವಾಗಿಯೇ ಹಲವು ರಾಜತಂತ್ರಗಳನ್ನು ನಡೆಯಿಸಿ, ಬ್ರಿಟಿಷ್ ಪ್ರಭುತ್ವದವರ ಸಹಾಯದಿಂದ ಶತ್ರುವರ್ಗವನ್ನು ನಿರ್ಮೂಲಗೊಳಿಸಿ, ರಾಜವಂಶಕ್ಕೆ ಪುನಃ ಸಿಂಹಾಸನವನ್ನು ದೊರಕಿಸಿಕೊಟ್ಟುದು ಬಹು ಮಹತ್ವದ ಸಂಗತಿಯು. ಅಂತಃಪುರವನ್ನು ಬಿಟ್ಟು ಹೊರಕ್ಕೆ ಬಾರದಿದ್ದರೂ, ತಮ್ಮ ಬುದ್ಧಿ ಸಾಮರ್ಥ್ಯದಿಂದ ಶತ್ರುನಿಗ್ರಹೋಪಾಯವನ್ನು ಚಿಂತಿಸಿ ಕಾರ್ಯಸಾಧನೆ ಮಾಡಿದ ಈ ನಾರೀಮಣಿಯ ಸಾಹಸವು ರಾಜಕಾರ್ಯ ಚತುರರಾದ ಪುರುಷಶ್ರೇಷ್ಠರ ಶ್ಲಾಘನೆಗೂ ಪಾತ್ರವಾಗಿರುವುದು. ಆದರೆ, ಸ್ವದೇಶೀಯರಾದ ಹೈದರಾಲಿ ಟಿಪ್ಪು ಮುಂತಾದವರ ನಾಶಕ್ಕೆ-ವಿದೇಶೀಯರಾದ ಬ್ರಿಟಿಷರ ಸಹಾಯಗೊಂಡು ರಾಜ್ಯಸಂಪಾದನೆ ಮಾಡಿದ ಈ ಕಾರ್ಯವು, ಕಾವಲಿಯಲ್ಲಿದ್ದು ಬೇಯಲಾರದೆ ಹೊರಳಿ ಒಲೆಯಲ್ಲಿ ಬಿದ್ದಂತಾಯಿತಲ್ಲವೆ ಎಂದು ಕೆಲವರಿಗೆ ತೋರಬಹುದು. ಹಾಗೆ ಯೋಚಿಸಲು ಕಾರಣವಿಲ್ಲ. ಆಗಿನ ಸ್ಥಿತಿಯಲ್ಲಿ ಅದಕ್ಕಿಂತಲೂ ಸ್ವತಂತ್ರವ ಸುರಕ್ಷಿತ ಮಾರ್ಗವೊ ಇರಲಿಲ್ಲ-ಆ ಸಂದರ್ಭವನ್ನೂ ಅನು

ಶಲ್ಯವನ್ನೂ ಯೋಗ್ಯರೀತಿಯಿಂದ ಉಪಯೋಗಿಸಿಕೊಂಡು, ಕಾರ್ಯ ಸಾಧನೆ ಮಾಡಿದುದೇ ನಮ್ಮ ಕಥಾನಾಯಿಕೆಯ ಪ್ರತಿಭಾ ಪ್ರದರ್ಶಕ ಸಾಮರ್ಥ್ಯವನ್ನು ಸೂಚಿಸುತ್ತದೆ. ಈ ಮಾರ್ಗವನ್ನನುಸರಿಸಿ ಆಗ ಅಷ್ಟುಮಟ್ಟಿನ ಕಾರ್ಯವು ನಡೆಯದಿದ್ದಲ್ಲಿ, ಮೈಸೂರಿನ ರತ್ನ ಸಿಂಹಾಸನವು ಇಂದು ಆರ್ಷೇಯ ಹಿಂದೂ ರಾಜವಂಶಾನುಯಾಯಿಗಳಿಂದ ವಿಭೂಷಿತವಾಗುವುದಕ್ಕೆ ಪ್ರತಿಯಾಗಿ, ವಿಧರ್ಮಿಗಳಾದ ಮಹಮ್ಮದೀಯ ಅರಸರಿಂದ ಆಳಲ್ಪಡಬೇಕಾಗುತ್ತಿದ್ದಿತೆಂಬುದಕ್ಕೆ ಸಂಶಯವಿಲ್ಲ. ಆದುದರಿಂದ ಅಂತಹ ದುರಂತ ಸಂಕಟ ಕಾಲದಲ್ಲಿ ನಮ್ಮ ಕಥಾನಾಯಿಕೆಯವರು ಹೇಗೆ ಕಾರ್ಯ ಸಾಧನೆ ಮಾಡಿದರೆಂಬುದು ಮೈಸೂರಿನ ರಾಜನಿಷ್ಠ ಪ್ರಜೆಗಳೂ, ಬಾಲಕ ಬಾಲಿಕೆಯರೂ ತಿಳಿಯಬೇಕಾದ ವೃತ್ತಾಂತವಾಗಿದೆ. ಅದನ್ನು ಇಲ್ಲಿ ಯಥಾಮತಿ ಸಂಗ್ರಹವಾಗಿ ಕೊಡಲಾಗುತ್ತದೆ. ಗ್ರಂಥಮಾಲಾಭಿಮಾನಿಗಳಾದ ಕರ್ಣಾಟಕ ಮಹಾಜನರು, ಸ್ವಾಭಾವಿಕ ಪ್ರೇಮದಿಂದ ಇದಕ್ಕೂ ಸ್ವಾಗತವನ್ನಿತ್ತು, ನಮ್ಮ ಭಾಷಾ ಸೇವೆಗೆ ಪ್ರೋತ್ಸಾಹಕರಾಗಬೇಕೆಂದು ಪ್ರಾರ್ಥಿಸುತ್ತೇವೆ.

ಬೆಂಗಳೂರು ನಗರ,
ತಾ॥ ೧೮-೪-೧೯೩೦.

ಇತಿ ಸುಜನ ವಿಧೇಯ,
ಯಂ. ರಮರಾವ್.



ಸುಬೋಧ ಮುದ್ರಣಾಲಯ, ಬೆಂಗಳೂರು ನಗರ.—೧೯೩೦—೩೦೦೦ ಪ್ರತಿಗಳು.

ಧೀರರೆಂತಿರುವರು ?

ಕಂ|| ಎಡರಡಸುವು ದೆಂದಂಜುತೆ
ತೊಡಗರ್ಕಾರ್ಯವನೆ ನೀಚರೆಡರಡಸಲೊಡಂ
ಬಿಡುವರ್ಮಧ್ಯಮ ರೆಡರೆನಿ
ತಡಸಿದೊಡಂ ತ್ಯಜಿಸರಾಂತಕೃತ್ಯವ ಧೀರರ್

'ವಿಘ್ನವು ಪ್ರಾಪ್ತಿಸುವುದೆಂದು ಹೆದರಿ ಅಧಮರು, ಕಾರ್ಯ ಪ್ರಯತ್ನವನ್ನೇ ಮಾಡುವುದಿಲ್ಲ. ಮಧ್ಯಮರು ಕಾರ್ಯ ಪ್ರಯತ್ನವನ್ನೇನೋ ಮಾಡಿ ಕಷ್ಟಬಂದಿತೆಂದೊಡನೆಯೇ ಅದನ್ನು ಬಿಟ್ಟುಬಿಡುತ್ತಾರೆ. ಆದರೆ ಉತ್ತಮ ವರ್ಗಕ್ಕೆ ಸೇರಿದ ಧೀರರು ತಾವು ಪ್ರಾರಂಭಿಸಿದ ಕಾರ್ಯಕ್ಕೆ ಎಷ್ಟು ವಿಘ್ನಗಳು ಪ್ರಾಪ್ತವಾದರೂ ಅದನ್ನು ಬಿಡದೆ ಸಾಧಿಸಿಯೇ ತೀರುವರು.'

ಕಂ|| ಕೆಡುಕರ್ಕೆಡುಕುಗಳಂ ಗೈ
ದೊಡಮೆನಿತುಂ ತೊರೆಯನಾತ್ಮಧೈರ್ಯವ ಧೀರಂ
ಬಿಡುವನೆ ಯಧೋಮುಖಂ ಗೈ
ದೊಡ ಮೂರ್ಧ್ವಜ್ವಲನಮುಂ ಹುತಾಶನನೆಂದುಂ

"ಧೀರನಾದವನು, - ಕೆಡುಕರು ತನಗೆ ಎಷ್ಟುಬಗೆಯಿಂದ ಕೆಡಕುಗಳನ್ನುಂಟುಮಾಡಿ, ವಿಘ್ನಗಳನ್ನು ತಂದೊಡ್ಡಿ ತನ್ನ ಕಾರ್ಯಕ್ಕೆ ಹಾನಿಯನ್ನುಂಟುಮಾಡಲೆಣಿಸಿದರೂ ತನ್ನ ಧೈರ್ಯವನ್ನೂ ಉದ್ಯಮವನ್ನೂ ಎಂದಿಗೂ ತೊರೆಯಲಾರನು. ಪಂಜನ್ನು ತಲೆಕೆಳಗಾಗಿ ಹಿಡಿದರೂ ಜ್ವಾಲೆಯು ಊರ್ಧ್ವಮುಖವಾಗಿಯೇ ಉರಿಯುತ್ತಿರುವುದಲ್ಲವೆ ?"



[illegible]

[illegible]

[illegible]

[illegible]

[illegible]

[illegible]

[illegible] 1000 [illegible]

[illegible]

~~[illegible]~~ Balwant Singh

15-11-2-[illegible]

[illegible]

[illegible]

[illegible]

[illegible]



ಮಹಾರಾಣಿ ಲಕ್ಷ್ಮಮ್ಮಣ್ಣಿಯವರ ಅವಿರಳ ಪರಿಶ್ರಮದಿಂದ
ಮೈಸೂರು ಸಂಸ್ಥಾನದ ಆರ್ಷೇಯ ರಾಜಸಿಂಹಾಸನವನ್ನೇರಿದ
ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರವರು.

ಶ್ರೀರಾಮಸಹಾಯಂ

ಮಹಾ ಮಾತೃ ಶ್ರೀ

ಲಕ್ಷ್ಮಮ್ಮಣ್ಣಿಯವರು

ಅಧ್ಯಾಯ ೧ "ಮೈಸೂರು ರಾಜವಂಶ"

'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂಬ ವಾಕ್ಯ ರತ್ನವನ್ನು ನುಡಿದು, ಆರ್ಯರು, ಜನ್ಮಭೂಮಿಯೂ-ಜನನಿಯಂತೆಯೇ ಪೂಜ್ಯವಾದುದೆಂದೂ, ಜನನೀ ಜನ್ಮಭೂಮಿಗಳೆರಡೂ ಸ್ವರ್ಗಕ್ಕಿಂತಲೂ ಶ್ರೇಷ್ಠವಾದುವೆಂದೂ ಸಾರಿದರು. ಜನನಿಯು ನಮಗೆ ಜನ್ಮವಿತ್ತು, ಪೋಷಿಸಿ ಹೇಗೆ ಉಪಕಾರಿಣಿಯಾಗಿದ್ದರೆ, ಜನ್ಮಭೂಮಿಯು ಅಂತಹ ನಮ್ಮ ಮಾತೃವಿಗೂ ಜನ್ಮದಾತೃವಾಗಿ, ನಮಗೆ ಸಕಲವಿಧ ಆಹಾರ ಪಾನೀಯಗಳನ್ನೂ ಒದಗಿಸಿ-ಬದುಕಿ ವಾಸಿಸಲು ಎಡೆಯನ್ನು ಕಲ್ಪಿಸಿ, ಹೀಗೆ ಬದುಕಿರುವಷ್ಟು ಕಾಲವೂ ಪರಮೋಪಕಾರಿಣಿಯಾಗಿ ನಮ್ಮ ಚಿರ ಕೃತಜ್ಞತೆಗೆ ಪಾತ್ರವಾಗಿದೆ. ಇಂತಹ ದೇಶಮಾತೃವನ್ನು ನಿತ್ಯವೂ ತ್ರಿಕಾಲಗಳಲ್ಲೂ ಸ್ಮರಿಸಿ ಕೃತಜ್ಞನಾಗಿರತಕ್ಕುದು ದೇಶಪುತ್ರನ ಕರ್ತವ್ಯವೆಂಬುದನ್ನು ಸೂಚಿಸಲಿಕ್ಕಾಗಿಯೇ ಪ್ರಾಚೀನ ಮಹರ್ಷಿಗಳು, 'ಭರತವರ್ಷೇ-ಭರತಖಂಡೇ' ಎಂಬೀ ಪದಗಳನ್ನು ಸಂಧ್ಯಾಸಂಕಲ್ಪದಲ್ಲಿ ಸೇರಿಸಿರುವರೆಂದು ಭಾವಿಸಲು ಆಕ್ಷೇಪವೇನುಂಟು !

ಹೀಗೆ ನಮ್ಮ ಮಾತೃಭೂಮಿಯಾದ ಭಾರತ ದೇಶವನ್ನು ಮಾತೃಸದೃಶವಾದುದೇ ಎಂದು ಪರಮ ಭಕ್ತಿಯಿಂದ ಸೇವಿಸಬೇಕಾದುದು ಪ್ರತಿಯೊಬ್ಬ ವ್ಯಕ್ತಿಯ ಪ್ರಥಮ ಕರ್ತವ್ಯವು. ಅಂತಹ ಮಾತೃಭೂಮಿಯು

ದುರದೃಷ್ಟದಿಂದ ಪರಾಕ್ರಾಂತವಾಗಿ, ದೇಶೀಯರಿಗೆ ಪರಾಧೀನತೆಯು ಪ್ರಾಪ್ತವಾಗಿದ್ದ ಸಂದರ್ಭದಲ್ಲಿ ದೇಶಪುತ್ರರು ತಮ್ಮ ಧನಧಾನ್ಯ ಪಶು ಕ್ಷೇತ್ರಾದಿಗಳನ್ನು ಮಾತ್ರವಲ್ಲ-ತನುಮನಗಳನ್ನೂ ಸಮರ್ಪಿಸಿ ದೇಶಮಾತೆಯ ದಾಸ್ಯವನ್ನು ನೀಗಿಸಲು ಹಿಂಜರಿಯಬಾರದು. ಇಂತಹ ದಾಸ್ಯಸ್ಥಿತಿಯು ಲೋಕದ ಸಮಸ್ತ ದೇಶಗಳಿಗೂ ಒಂದಲ್ಲ ಒಂದು ವೇಳೆ ಪ್ರಾಪ್ತವಾಗಿಯೇ ಇರುವುದು. ಆ ಸಂದರ್ಭಗಳಲ್ಲೆಲ್ಲ ಆಯಾ ದೇಶೀಯರು ಪ್ರಾಣಗಳನ್ನು ತೃಣವಾಗೆಣಿಸಿ, ತಮ್ಮೆದೆಯ ರಕ್ತವನ್ನು ನೀರಿನಂತೆ ಅಘಾದೃಷ್ಟಿಯಿಂದ ಸುರಿಸಿ, ಶತ್ರುಗಳನ್ನು ನಿವಾರಿಸಿಕೊಂಡು, ತಮ್ಮ ದೇಶಮಾತೆಯ ಗೌರವಾಭಿಮಾನಗಳನ್ನು ಕಾಪಾಡಿ ತಾವೂ ಸ್ವತಂತ್ರರಾಗಿ ಜಗನ್ಮಾನ್ಯರೆನ್ನಿಸಿಕೊಂಡರು. ಮಾತೃದೇಶದ ಸ್ವಾತಂತ್ರ್ಯ ಸಾಧನೆಗಾಗಿ ಹೋರಾಡಿದ ಇಂತಹ ಪುರುಷ ಪುಂಗವರ ದಿವ್ಯನಾಮಗಳು ಪ್ರತಿಯೊಂದು ದೇಶದ ಚರಿತ್ರಾಕಾಶದಲ್ಲೂ ನಕ್ಷತ್ರಗಳಂತೆ ಪ್ರಕಾಶಮಾನವಾಗಿದೆ.

ವಿಧಿನಿಯಮದಿಂದಲೋ ಎಂಬಂತೆ ಪೃಥ್ವಿಯ ಸಕಲ ದೇಶಗಳಿಗೂ ಒಂದಿಲ್ಲೊಂದು ಕಾಲಕ್ಕೆ ಪ್ರಾಪ್ತವಾಗುವ ಈ ದಾಸ್ಯಸ್ಥಿತಿಯು, ದುರ್ದೈವದಿಂದ ಭಾರತದೇಶಕ್ಕೂ ಪ್ರಾಪ್ತವಾಯಿತು. ದೇಶೀಯರು ವಿವಿಧ ಕಷ್ಟನಷ್ಟಗಳಿಗೂ ಅಗೌರವ ಅಪಮಾನಗಳಿಗೂ ಒಳಪಟ್ಟು ನೆಗ್ಗಿ ನುಗ್ಗಿ ಹಣ್ಣಾದರು. ಭಾರತೀಯರೆಂದರೆ, ಆದ್ಯಂತ ಭಾರತದೇಶದಲ್ಲಿ ಜನಿಸಿ ವಾಸಿಸುವ ಸಕಲರೂ ಎಂದು ಅರ್ಥವಾಗುತ್ತಿದ್ದರೂ, ಅವರಲ್ಲಿ ಮತ್ತೊಂದು ತರಗತಿಯೂ ಉಂಟು. ಭಾರತದೇಶದಲ್ಲಿ ದೇಶೀಯರಾಜರ ಪಾಲನೆಗೊಳಪಟ್ಟಿರುವ ಹಲವು ಸಂಸ್ಥಾನಗಳಲ್ಲಿ ವಾಸಿಸುತ್ತಿರುವ ಪ್ರಜೆಗಳೇ ಈ ಎರಡನೆಯ ತರಗತಿಗೆ ಸೇರಿದವರು. ಒಟ್ಟಿನಮೇಲೆ ದೇಶೀಯ ಸಂಸ್ಥಾನ ನಿವಾಸಿಗಳೂ, ವಿಶಾಲ ಭಾರತ ನಿವಾಸಿಗಳೂ ಹೀಗೆ ಎರಡು ವರ್ಗದವರೂ ಪರಾಧೀನತೆಗೆ ಒಳಪಟ್ಟಿರುವವರೇ ಆದರೂ, ದೇಶೀಯ ಸಂಸ್ಥಾನಗಳಲ್ಲಿರುವವರ ಪರಾಧೀನತಾ ವಸ್ತ್ರವು ಎರಡು ಮಡಿಕೆಗಳನ್ನುಳ್ಳದಾಗಿರುವುದು. ಅವರಿಗೆ ಎರಡು ಬಗೆಯ ಒತ್ತಡವುಂಟು. ಒಂದು ಆದ್ಯಂತ ಭಾರತದ ಆಳರಸರದು. ಮತ್ತೊಂದು ದೇಶೀಯ ಪ್ರಭುಗಳದು. ದೇಶೀಯ ಪ್ರಭುಗಳು ತಮ್ಮ ಇಚ್ಛಾನುಸಾರವಾಗಿ ಕಲ್ಪಿಸುವ ನಿಯಮಗಳು ಕೆಲವು, ಹೇರುವ

ಕಂದಾಯ, ತೆರಿಗೆಗಳು ಕೆಲವು, ಸುಲಿವ ಸುಂಕಗಳು ಕೆಲವು-ಸಾಮ್ರಾಜ್ಯ ಪ್ರಭುತ್ವದವರು ತಮ್ಮ ಇಷ್ಟ ಅನುಕೂಲತೆಗಳನ್ನು ಅನುಸರಿಸಿ ಹೊರೆಸಿ ಸೆಳೆಯುವ ಸುಂಕಗಳು ಕೆಲವು. ಹೀಗೆ ದೇಶೀಯ ರಾಜ್ಯಗಳವರು-ಗೋಡೆಯ ಪಕ್ಕದಲ್ಲಿ ನಿಂತು ಕೆನ್ನೆಗೆ ಹೊಡೆಸಿಕೊಂಡವನಂತೆ-ಎರಡು ಬಗೆಯ ನಿರ್ಬಂಧಗಳಿಗೂ ಸಿಕ್ಕು ಸಂಕಟಪಡುತ್ತಿದ್ದಾರೆ. ಇವರಲ್ಲಿ ಕೆಲವರಿಗೆ ದಿನದಿನಕ್ಕೆ ದೇಶದಲ್ಲಿ ಪ್ರಬಲಿಸುತ್ತಿರುವ ಕಷ್ಟ ತಾಪತ್ರಯಗಳಿಗೆ ಮೂಲಕಾರಣವಾಗಿರುವ ರಾಜ್ಯಪಾಲನೆಯ ಅವ್ಯವಸ್ಥ ಸ್ಥಿತಿ ಮುಂತಾದುವುಗಳ ಪರಿಚಯವಿಲ್ಲದೆ, ಅವರು 'ಕಲಿಯುಗ-ಕಾಲ ಕೆಟ್ಟುಹೋಯಿತು' ಎಂದು ಮುಂತಾಗಿ ಮಾತ್ರ ಹೇಳಿಕೊಳ್ಳುವರು. ನಿಶ್ಚಯವಾದ ದೇಶಸ್ಥಿತಿಯ ಪರಿಜ್ಞಾನವಿದ್ದವರಿಗೆ ತಮಗೆ ಪ್ರಾಪ್ತವಾಗಿ-ತಮ್ಮ ಪ್ರಾಣಾಧಾರವಾದ ರಕ್ತವನ್ನು ಹೀರಿ, ಮಾಂಸವನ್ನು ಶೋಷಿಸಿ, ಎಲುಬನ್ನು ಕರಗಿಸುತ್ತಿರುವ ಈ ಕ್ಷಯರೋಗಕ್ಕೆ ಕಾರಣವು ಮತ್ತಾವುದೂ ಅಲ್ಲ, ಸ್ವಾರ್ಥಪರರೂ ದುಂದುಗಾರರೂ, ವಿಷಯ ಲೋಲುಪರೂ ಆದ ರಾಜ್ಯಾಧಿಕಾರಿಗಳ ಧೂರ್ತತೆ ದುರ್ನಡತೆಗಳೇ ಎಂದು ತೋರಿಬರುವುದು. ಹೀಗೆ ಯಾವುದೊಂದು ದೇಶದಲ್ಲಿ ಅಧಿಕಾರಿಗಳ ಪ್ರಾಬಲ್ಯವುಂಟಾಗಲು, ರಾಜನ ದರ್ಪಯುಕ್ತ ಅಧಿಕಾರವು ತಪ್ಪುವುದೇ ಮುಖ್ಯ ಕಾರಣವು. ಹೀಗೆ ರಾಜನ ದರ್ಪವೂ ಅಧಿಕಾರಿವರ್ಗದ ಪ್ರಾಬಲ್ಯವೂ ಹೆಚ್ಚುವುದಕ್ಕೆ, ರಾಜನು ಬಾಲಕನಾಗಿರುವುದೂ, ರಾಜ್ಯಕ್ಕೆ ಸ್ತ್ರೀಯು ಅಧಿಕಾರಿಣಿಯಾಗಿರುವುದೂ ಅನುಕೂಲ ಸಂದರ್ಭಗಳು. ಮಾತ್ರವಲ್ಲ-ಮುಖ್ಯಾಧಿಕಾರಿಯು ರಾಜನ ಸಂಬಂಧಿಯೂ, ಸ್ನೇಹಿತನೂ, ಆಗಿದ್ದ ಸಂದರ್ಭದಲ್ಲೂ ಅಧಿಕಾರಸ್ಥಾನದ ಸುವ್ಯವಸ್ಥೆಗೆ ಭಂಗ ಬರುವುದುಂಟು. ಹೀಗೆ ಹೇಳಿದುದರಿಂದ, ರಾಜ್ಯದ ಮುಖ್ಯಾಧಿಕಾರಿಯು ರಾಜನೊಂದಿಗೆ ಸ್ನೇಹವಾಗಿರದೆ ಶತ್ರುಸ್ಥಾನದಲ್ಲಿರಬೇಕೆಂದು ಅರ್ಥವಾಗಬಾರದಷ್ಟೆ! ಈ ಸಂದರ್ಭದಲ್ಲಿ ನಮ್ಮ ಅಭಿಪ್ರಾಯವಿಷ್ಟೆ! ಅಂತಹ ಅಧಿಕಾರಿಗೆ ರಾಜನೊಂದಿಗಿರುವ ಸ್ನೇಹವು, ಆತನನ್ನು -'ತಾನು ರಾಜನ ಸೇವಕನು, ರಾಜ್ಯದ ರಕ್ಷೆಯ ವಿಚಾರದಲ್ಲಿ ತಾನು ಪ್ರಭುವಿಗೆ ಉತ್ತರವಾದಿಯು' ಎಂಬ ಭಾವನೆಯನ್ನು ಕಳೆದುಕೊಳ್ಳದಂತೆ ರಕ್ಷಿಸುವುದಾಗಿರಬೇಕು. ಹೀಗೆ ರಾಜನಿಗೂ ಅಧಿಕಾರಿಗೂ ಸೇವ್ಯ ಸೇವಕ ಭಾವನೆಯು ತಪ್ಪಿ-ಅಧಿಕಾರಿಯು

ತನಗೂ ರಾಜನಿಗೂ ಅದ್ವೈತ ಭಾವನೆಯನ್ನು ಕಲ್ಪಿಸಿಕೊಂಡ ಸಂದರ್ಭದಲ್ಲಿ ಪ್ರಜೆಗಳ ಕಷ್ಟ ನಷ್ಟಗಳು ಮೇರೆ ಮೀರುವುವು. ಅವರು ತಮ್ಮ ತೊಂದರೆ ತಾಪತ್ರಯಗಳನ್ನು ಕುರಿತು ಯಾರಲ್ಲಿ ಮೊರೆಯಿಟ್ಟುಕೊಳ್ಳಬೇಕು! ರಾಜ ಮತ್ತು ಅಧಿಕಾರಿ ವರ್ಗದಲ್ಲಿ ಯಜಮಾನ ಸೇವಕಭಾವವು ತಪ್ಪುವುದರಿಂದಲೇ ಇಂತಹ ಸ್ಥಿತಿಯು ಪ್ರಾಪ್ತವಾಗಿ ದೇಶದಲ್ಲಿ ಶಾಂತಿಯು ನಾಶವಾಗಲು ಕಾರಣವಾಗುವುದು.

ವಂಶಪಾರಂಪರ್ಯವಾಗಿ ಪ್ರಭುತ್ವಮಾಡುತ್ತ ಬರುತ್ತಿರುವ ಭಾರತದೇಶೀಯ ಸಂಸ್ಥಾನಗಳ ರಾಜವಂಶಗಳಲ್ಲಿ ಕೆಲವು ಸಂತತಿ ವಿಹೀನವಾದ ಕಾರಣದಿಂದಲೂ, ಮತ್ತೆ ಕೆಲವು ಪರಸ್ಪರ ಒಳಜಗಳಗಳಿಂದಲೂ, ಬೇರೆ ಕೆಲವುಗಳಲ್ಲಿ ಪ್ರಭುಗಳು ವಿಷಯಲೋಲುಪರಾದ ಕಾರಣದಿಂದಲೂ ಪರಾಧೀನವಾಗಿ ವಿವಿಧ ಕಷ್ಟ ನಷ್ಟಗಳಿಗೀಡಾದುವು. ಹದಿನೆಂಟನೆಯ ಶತಮಾನದಲ್ಲಿ ನಮ್ಮ ಮೈಸೂರು ದೇಶದ ರಾಜವಂಶಕ್ಕೆ ಮೇಲೆಹೇಳಿದ ಆಪದಗಳೆಲ್ಲವೂ ಏಕಕಾಲದಲ್ಲಿ ಒದಗಿದ್ದುವು. ರಾಜನೂ ಅಕಾಲ ಮೃತ್ಯುವಿಗೆ ತುತ್ತಾಗಿದ್ದನು. ಅಂತಃಪುರದ ಹೊಸ್ತಿಲನ್ನು ದಾಟಿ ಹೊರಕ್ಕೆ ಬರಲರಿಯದ ಅಬಲೆಯರು ರಾಜ್ಯಕ್ಕೆ ಬಾಧ್ಯಸ್ಥರಾಗಿ ನಿಂತಿದ್ದರು. ಅದೇಕಾಲದಲ್ಲಿ ಅಧಿಕಾರಿವರ್ಗವು ದಿನದಿನಕ್ಕೆ ಪ್ರಬಲಿಸಿ, ರಾಜವಂಶವನ್ನೇ ಮೂಲೆಗೊತ್ತಿ ರಾಜ್ಯಾಕ್ರಮಣ ಮಾಡಲು ಹೊಂಚುಹಾಕುತ್ತಿದ್ದಿತು. ಇಂತಹ ದುರಂತ ಸಂಕಟ ವೇಳೆಯಲ್ಲಿ,-ಸಂಸ್ಥಾನವು ಪರಾಧೀನವಾಗಿ, ಸ್ವಗೃಹವೇ ಸೆರೆಮನೆಯೂ, ಸ್ವದೇಶವೇ ಪರದೇಶವೂ ಆಗಿ ಮಾರ್ಪಟ್ಟಿದ್ದ ಆ ವೇಳೆಯಲ್ಲಿ-ತಮ್ಮ ಧೈರ್ಯಸಾಹಸಗಳು ರಾಜತಂತ್ರ, ಕುಶಲತೆ ಇವುಗಳಿಂದ ಪೂರ್ವದ ಮೈಸೂರು ರಾಜವಂಶವನ್ನು ಜೀರ್ಣೋದ್ಧಾರಗೊಳಿಸಿ, ಪರಾಕ್ರಾಂತವಾಗಿದ್ದ ದೇಶವನ್ನು ಪುನಃ ಸ್ವಾಧೀನಗೊಳಿಸಿ ರಕ್ಷಿಸಿದ ನಮ್ಮ ಕಥಾನಾಯಿಕೆ ಲಕ್ಷ್ಮಮ್ಮಣ್ಣಿಯವರನ್ನು ಆದ್ಯಂತ ದೇಶವೂ. ರಾಜ ಮನೆತನವೂ ಮಹಾ ಮಾತೃಶ್ರೀ ಎಂದು ಗೌರವಿಸಿದರೆ ಅದರಲ್ಲಿ ಅತಿಶಯವೇನು ?

ವಂಶ ಕರ್ತೃಗಳಾದ ಯದುರಾಜರ ಕಾಲದಿಂದಲೂ ಅವಿಚ್ಛಿನ್ನವಾಗಿ ನಡೆದು ಬರುತ್ತಿರುವ ಈ ಮೈಸೂರು ರಾಜವಂಶಕ್ಕೆ ಮಧ್ಯಕಾಲದಲ್ಲಿ ಪ್ರಾಪ್ತವಾಗಿದ್ದ ಅಂತಹ ಸಂಕಟವೇನು; ಅದು ನಮ್ಮ ಕಥಾನಾಯಿಕೆಯ ಪ್ರಯ

ಮದಿಂದ ಹೇಗೆ ನಿವಾರಣೆಯಾಯಿತು ಎಂಬುದನ್ನು ಮುಂದಿನ ಅಧ್ಯಾಯಗಳಲ್ಲಿ ತಿಳಿಯಬಹುದು.



ಅಧ್ಯಾಯ ೨　　　　"ಲಕ್ಷ್ಮಮ್ಮಣ್ಣಿಯವರು"

ಮೈಸೂರು ರಾಜಸಿಂಹಾಸನವನ್ನೇರಿದ ಪ್ರಭುಗಳಲ್ಲಿ, ಶ್ರೀಮದ್ದ್ವಾರಕಾನಗರೀ ಪ್ರಾಂತದಿಂದ ಬಂದ ಯದುರಾಯರೇ ಮೊದಲನೆಯವರು. ಈಗಿನ ರಾಜವಂಶಕ್ಕೆ ಮೂಲಪುರುಷರೂ ಈ ಮಹನೀಯರೇ. ಇವರು ಕ್ರಿ. ಶ. ಹದಿನಾಲ್ಕನೆಯ ಶತಮಾನದ ಅಂತ್ಯಭಾಗದಲ್ಲಿ ಮಾರನಾಯಕನೆಂಬ ದುಷ್ಟ ಪಾಳೆಯಗಾರನ ಬಾಧೆಯಿಂದ ಮೈಸೂರಿನ ಚಾಮರಾಜರ ಪತ್ನಿ ದೇವಾಜಮ್ಮಣ್ಣಿಯವರನ್ನು ಕಾಪಾಡಿ, ಅವರ ಪುತ್ರಿಯ ಪಾಣಿಗ್ರಹಣಮಾಡಿ, ಮೈಸೂರು ರತ್ನ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತರಾದರು. ಇವರಿಗೆ ಪಟ್ಟಾಭಿಷೇಕವಾದ ಕ್ರಿ. ಶ. ೧೩೯೯ನೆಯ ಸಂವತ್ಸರದಿಂದ, ೧೭೯೯ನೆಯ ಸಂವತ್ಸರದವರೆಗೆ ಈ ಪೀಠವನ್ನು ಇಪ್ಪತ್ತೊಂದು ಮಂದಿ ಇವರ ವಂಶೀಕರಾದ ಅರಸರು [illegible] ಆಧಿಪತ್ಯಮಾಡಿದರು. ಆದಿಯಿಂದ ಈಗಿನವರೆಗೂ, ಈ ರಾಜಮನೆತನಕ್ಕೆ ಮೈಸೂರು ಪಟ್ಟಣವೇ ರಾಜಧಾನಿಯಾಗಿರುವುದು. ಒಂಬತ್ತನೆಯ ಪಟ್ಟದ ರಾಜಒಡೆಯರು, ಮೂವತ್ತೊಂಬತ್ತು ವರ್ಷಕಾಲದ ತಮ್ಮ ದೀರ್ಘವಾದ ಆಳ್ವಿಕೆಯಲ್ಲಿ, ದೇಶವನ್ನು ವಿಶೇಷವಾಗಿ ವಿಸ್ತರಿಸಿ ವಿಖ್ಯಾತರೆನ್ನಿಸಿಕೊಂಡರು. ಕ್ರಿ. ಶ. ೧೬೧೦ನೆಯ ಸಂವತ್ಸರದಲ್ಲಿ ವಿಜಯನಗರ ರಾಜ್ಯಕ್ಕೆ ಸೇರಿದ್ದ ಶ್ರೀರಂಗಪಟ್ಟಣವೂ ಇವರಿಗೆ ಕೈವಶವಾಗಿ ಮೈಸೂರು ರಾಜರ ಕೀರ್ತಿ ಪ್ರತಿಷ್ಠೆಗಳು ಮತ್ತೂ ಹೆಚ್ಚಿದುವು. ಇವರ ತರುವಾಯ ಪಟ್ಟಕ್ಕೆ ಬಂದ ಇಬ್ಬರು ರಾಜರುಗಳ ಕಾಲದಲ್ಲಿ ಅಷ್ಟು ಪ್ರಸಿದ್ಧ ಸಂಗತಿಗಳಾವುವೂ ನಡೆಯಲಿಲ್ಲವಾದರೂ, ಹನ್ನೆರಡನೆಯ ಪಟ್ಟದ ರಣಧೀರ ಕಂಠೀರವ ನರಸರಾಜಒಡೆಯರವರ ಕಾಲದಲ್ಲೂ, ತರುವಾಯ ಹದಿನಾಲ್ಕನೆಯ ಪಟ್ಟದ ಚಿಕ್ಕದೇವರಾಜ ಒಡೆಯರವರ ಕಾಲದಲ್ಲೂ ಮೈಸೂರು ರಾಜ್ಯದ ಗಡಿಗಳು ನಾಲ್ಕು ದಿಕ್ಕುಗಳಲ್ಲೂ ವಿಸ್ತರಿಸಲ್ಪ

ಟ್ಟವು. ಅನೇಕ ದುರ್ಗಗಳು ಕೈವಶವಾದುವು. ಸುತ್ತಮುತ್ತಲಿದ್ದ ಶತ್ರುರಾಜರೂ, ಪಾಳೆಯಗಾರರೂ ಈ ರಾಜವರೇಣ್ಯರ ಶೌರ್ಯ ಪ್ರತಾಪಾದಿಗಳಿಗೆ ಅಂಜಿ, ಶರಣಾಗತರಾಗಿ ಕಪ್ಪ ಕಾಣಿಕೆಗಳನ್ನೊಪ್ಪಿಸಿ, ಸಾಮಂತರಾಗಿರಲು ಒಪ್ಪಿದರು. ರಾಜ್ಯವು ಧನಧಾನ್ಯ ಸಮೃದ್ಧಿಯಿಂದ ತುಂಬಿರಲು ಪ್ರಜೆಗಳು ಸುಖ ಸಂತೋಷಗಳನ್ನು ಅನುಭವಿಸುತ್ತ ಭಾರತದೇಶದ ಸಕಲ ಸಂಸ್ಥಾನಗಳಿಗೂ ಇದು ಶಿರೋಭೂಷಣ ಪ್ರಾಯವಾದುದು ಎಂಬ ಪ್ರಶಂಸೆಗೆ ಪ್ರಾಪ್ತವಾಯಿತು. ಚಿಕ್ಕದೇವರಾಜ ಒಡೆಯರ ಮಹತ್ವಪೂರ್ಣ ಆಳ್ವಿಕೆಯು ಕ್ರಿ. ಶ. ೧೭೦೪ನೆಯ ಸಂವತ್ಸರದಲ್ಲಿ ಕೊನೆಗಾಣಲು, ತರುವಾಯ, ಕಂಠೀರವ ಮಹಾರಾಜರೂ, ದೊಡ್ಡಕೃಷ್ಣರಾಜ ಒಡೆಯರೂ ಕೆಲಕೆಲವು ಕಾಲ ರಾಜ್ಯಭಾರವಮಾಡಿ ಸ್ವರ್ಗಸ್ಥರಾದರು. ಈ ದೊಡ್ಡಕೃಷ್ಣರಾಜ ಒಡೆಯರ ವರೆಗೂ ರಾಜರು ಸ್ವಯಂ ಕರ್ತರಾಗಿ, ರಾಜ್ಯ ವಿಚಾರಗಳನ್ನು ಸ್ವತಃ ಗಮನಿಸುತ್ತಿದ್ದುದರಿಂದ ಅಧಿಕಾರಿಗಳ ಪ್ರಾಬಲ್ಯಕ್ಕೆ ಅಪ್ಪುವಟ್ಟಿಸ ಅವಕಾಶವುಂಟಾಗಿರಲಿಲ್ಲ. ತಮ್ಮ ರಾಜಧಾನಿಯಮೇಲೆ ದಂಡೆತ್ತಿ ಬಂದ ಮರಾಟೆಯವರನ್ನೂ, ಒಳನಾಡಿನ ತುಂಟ ಪಾಳೆಯಗಾರರನ್ನೂ ರಾಜರು ಸ್ವತಃ ಶಸ್ತ್ರಧಾರಿಗಳಾಗಿ ಹೋಗಿ ಅಡಗಿಸಿ ಬಹು ದರ್ಪದಿಂದ ಪ್ರಭುತ್ವವಮಾಡಿದರು. ಇವರು ಕ್ರಿ. ಶ. ೧೭೩೨ನೆಯ ಸಂವತ್ಸರದಲ್ಲಿ, ಸಂತತಿ ವಿಹೀನರಾಗಿ ಕೀರ್ತಿಶೇಷರಾದುದರಿಂದ, ರಾಜ್ಯಕ್ಕೆ ಇವರ ಪತ್ನಿಯರೇ ಬಾಧ್ಯಸ್ಥರಾಗಿ ನಿಂತರು.

ಅಂತಃಪುರ ನಿವಾಸಿಗಳಾದ ರಾಜಸ್ತ್ರೀಯರು ರಾಜ್ಯಕ್ಕೆ ಬಾಧ್ಯಸ್ಥರಾಗಿ ನಿಂತುದರಿಂದ, ರಾಜ್ಯಾಧಿಕಾರವು ಅವರ ಆಜ್ಞೆಯನ್ನನುಸರಿಸಿ ನಡೆವ ಅಧಿಕಾರಿಗಳ ಹಸ್ತಗತವಾಗಲು ಈಗಿನಿಂದ ಅವಕಾಶವುಂಟಾಯಿತು. ದೊಡ್ಡಕೃಷ್ಣರಾಜ ಒಡೆಯರು ಮೃತರಾದ ಈ ಸಂದರ್ಭದಲ್ಲಿ, ದಳವಾಯಿ ದೇವರಾಜಯ್ಯ, ಸರ್ವಾಧಿಕಾರಿ ನಂಜರಾಜಯ್ಯ ಮತ್ತು ಕರಾಚೂರಿ ನಂಜರಾಜಯ್ಯ ಎಂಬ ಅಧಿಕಾರಿಗಳು, ರಾಜಸೇವಕ ವರ್ಗದಲ್ಲಿ ಮುಖ್ಯಸ್ಥರಾಗಿದ್ದವರಿನ್ನುಳಿದರು. ಮೃತ ಮಹಾರಾಜರ ಪತ್ನಿಯವರಾದ ದೇವಾಜಮ್ಮಣ್ಣಿಯವರು, ತಮ್ಮ ಪತಿಯ ಮರಣಕಾಲದ ಸಂದೇಶವನ್ನನುಸರಿಸಿ ತಮ್ಮ ಜ್ಞಾತಿಯವರಾದ ಅಂಕನಹಳ್ಳಿ ದೇವರಾಜ ಅರಸಿನವರ ಮಗ ಇಪ್ಪತ್ತೆಂಟು

ವರ್ಷ ವಯಸ್ಸಿನ ಚಾಮರಾಜಯ್ಯನೆಂಬಾತನನ್ನು ಸಕುಟುಂಬವಾಗಿ ಕರೆಸಿ,
ದತ್ತು ಸ್ವೀಕಾರಮಾಡಿಕೊಂಡು, ಆತನಿಗೆ ರಾಜ್ಯವನ್ನು ವಹಿಸಿದರು. ಇದು
ಸರ್ವಾಧಿಕಾರಿಗಳಾಗಿದ್ದ ದಳವಾಯಿ ದೇವರಾಜಯ್ಯ ಮೊದಲಾದವರಿಗೆ ಸಹ
ನೆಯಾಗಲಿಲ್ಲ. ಚಾಮರಾಜಯ್ಯನು, ಮಹಾರಾಣಿಯವರ ಕೃಪಾಪಾತ್ರ
ನಾಗಿ ರಾಜ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತನಾಗಿದ್ದನಾದರೂ, ಈ ಅಧಿಕಾರಿ
ಗಳು,-ಎಲ್ಲೋ ಹುಟ್ಟಿ ಬೆಳೆದ ಯಾವನೋ ಅನಾಮಧೇಯನ ಆಜ್ಞೆಗೆ
ತಾವು ಬದ್ಧರಾಗಬೇಕಾದುದೇನೆಂದು ಚಾಮರಾಜರ ವಿಷಯದಲ್ಲಿ ಔದಾಸೀ
ನ್ಯವನ್ನು ವಹಿಸಿ, ತಮ್ಮ ಮನಬಂದಂತೆ ರಾಜ್ಯಾಡಳಿತಗಳನ್ನು ನಡೆಯಿಸಲು
ಆರಂಭಿಸಿದರು. ತಮಗೆ ಬೇಕಾದವರನ್ನು ಅಧಿಕಾರದಲ್ಲಿಟ್ಟು-ಬೇಡವಾದವ
ರನ್ನು ತೊಲಗಿಸುವ ವಿಷಯದಲ್ಲಿ ಸರ್ವ ಸ್ವಾತಂತ್ರ್ಯವನ್ನು ವಹಿಸಿದ್ದರು.
ಮನಬಂದಂತೆ ಲಂಚ ರುಷುವತ್ತುಗಳನ್ನು ಪಡೆದು ರಾಜ ಬೊಕ್ಕಸದ
ಗತಿಯನ್ನೇ ಗಮನಿಸದೆ ಸ್ವಾರ್ಥಸಾಧಕರಾಗಿದ್ದರು. ರಾಜ್ಯದಲ್ಲಿನ ಫಲವ
ತ್ತಾದ ಜಮೀನುಗಳನ್ನು ತಮ್ಮ ಸ್ವಂತಕ್ಕೆ ಪಡೆದು, ಹೀಗೆ ದಿನದಿನಕ್ಕೆ ಸಕಲ
ವಿಧಗಳಿಂದಲೂ ತಮ್ಮ ಉಗ್ರಾಣವನ್ನು ತುಂಬಿಕೊಳ್ಳುವ ಕಾರ್ಯದಲ್ಲಿಯೇ
ನಿರತರಾಗಿಬಿಟ್ಟರು. ಚಾಮರಾಜರನ್ನು ಕೇವಲ ಮೂಲವಿಗ್ರಹವಾಗಿಟ್ಟು,
ನಾಮಮಾತ್ರಕ್ಕೆ ದೊರೆಗಳೆನ್ನಿಸಿ, ನಿರೂಪಗಳಿಗೆ ದಸ್ಕತ್ತುಗಳನ್ನು ಮಾತ್ರ
ಅವರಿಂದ ಮಾಡಿಸುತ್ತ, ಯಾವ ಸ್ವಾತಂತ್ರ್ಯವೂ ಅವರ ಪಾಲಿಗೆ ಉಳಿಯ
ದಂತೆ ಮಾಡಿ, ಎಲ್ಲಾ ಆಡಳಿತಗಳನ್ನೂ ತಾವೇ ನಿರಂಕುಶವಾಗಿ ನಡೆಯಿಸ
ತೊಡಗಿದರು. ಈ ಆಡಳಿತವು ಹೀಗೆಯೇ ನಡೆದು ಬರಲೆಂದು ಉದಾಸೀನ
ಮಾಡಿ ಕುಳಿತರೆ, ರಾಜ್ಯವು ಮುಂದೆ ತಮ್ಮ ಸ್ವಾಧೀನದಲ್ಲಿ ನಿಲ್ಲಲಾರದೆಂಬ ವಿ
ಚಾರವು ಮನಸ್ಸಿಗೆ ಬರಲು, ಚಾಮರಾಜರು, ಈ ಅಧಿಕಾರಿಗಳ ಪ್ರಾಬಲ್ಯವ
ನ್ನತಗ್ಗಿಸಿ, ನಿರಂಕುಶ ಪ್ರವರ್ತಕರಾಗಿರುವ ಕೆಲವರನ್ನು ತೊಲಗಿಸಿ ಆ ಸ್ಥಳ
ಕ್ಕೆ ಬೇರೆ ತಮ್ಮ ಕಡೆಯವರನ್ನು ನಿಯಮಿಸಬೇಕೆಂದು ಯೋಚಿಸಿದರು.
ಈ ಸಂಗತಿಯು ದಳವಾಯಿ ದೇವರಾಜಯ್ಯನಿಗೆ ತಿಳಿಯಲು, ಆತನು ಮ
ಹಾರಾಣಿಯವರಲ್ಲಿಗೆ ಹೋಗಿ, ಚಾಮರಾಜರಮೇಲೆ ಅವರ ಮನಸ್ಸು ಕೆಡು
ವಂತೆ ಇಲ್ಲದ ಸಲ್ಲದ ದೂರುಗಳನ್ನೆಲ್ಲ ಹೇಳಿದನು. ಈ ವರ್ತಮಾನವು ತಿಳಿ
ದೊಡನೆಯೇ ಚಾಮರಾಜ ಒಡೆಯರು ದೇವರಾಜಯ್ಯನನ್ನು ಅಧಿಕಾರದಿಂದ

ತಪ್ಪಿಸಿ, ಆ ಸ್ಥಳಕ್ಕೆ ದೇವಯ್ಯನೆಂಬೊಬ್ಬ ಸಮರ್ಥನಾದ ಬ್ರಾಹ್ಮಣನನ್ನೂ ನಂಜರಾಜಯ್ಯನ ಸ್ಥಾನಕ್ಕೆ ಬೇರೊಬ್ಬನನ್ನೂ ನಿಯಮಿಸಿ, ಪ್ರಾಜ್ಞರಾದ ಹಲವು ಮಂದಿಯನ್ನು ಮಂತ್ರಾಲೋಚನೆಗೆ ಇಟ್ಟುಕೊಂಡು, ಸರ್ವವಿಷಯಗಳಲ್ಲೂ ಸ್ವತಂತ್ರರಾಗಿ, ಧರ್ಮದಿಂದ ಹದಿನೆಂಟು ತಿಂಗಳ ಕಾಲ ರಾಜ್ಯಭಾರಮಾಡಿದರು.

ಅಧಿಕಾರದ ರುಚಿಯನ್ನು ಕಂಡ ಜನರು, ಅಧಿಕಾರ ಭ್ರಷ್ಟರಾಗಿ ರಾಜ್ಯದಲ್ಲಿ ಪ್ರಬಲರಾಗಿರುವುದೆಂದರೆ, ಆ ಸ್ಥಿತಿಯನ್ನು-ಉಗ್ರಾಣದ ಬೊಕ್ಕಯೊಳಗೆ ಹೆಗ್ಗಣವನ್ನು ಕೂಡಿ ಗೂಡಿನ ಬಾಯಿಗೆ ಮಣ್ಣು ಮೆತ್ತಿದ ಸ್ಥಿತಿಗೆ ಹೋಲಿಸಬಹುದು. ದೇವರಾಜಯ್ಯ - ನಂಜರಾಜಯ್ಯಾದಿಗಳೂ ಅವರ ಪರಿವಾರದವರೂ, ರಾಜನ ಈ ಸ್ವತಂತ್ರ ವೃತ್ತಿಯನ್ನು ಕಂಡು ಸಹಿಸಲಾರದೆ, ಅವನನ್ನು ಹೇಗಾದರೂ ಮೂಲೋತ್ಪಾಟನ ಮಾಡಬೇಕೆಂದು ಸಂಕಲ್ಪಮಾಡಿ, ಎಂಟುಸಾವಿರ ಸೈನಿಕರು ರಾಜನಿಗೆ ಎದುರುಬೀಳುವಂತೆ ಪಿತೂರಿಮಾಡಿದರು. ಸಾಲದುದಕ್ಕೆ ತಮ್ಮ ಕಡೆಯ ಜನರನ್ನು ಅರಮನೆಯ ಬಳಿಯಲ್ಲೂ ಪಟ್ಟಣದ ಮುಖ್ಯ ಸ್ಥಳಗಳಲ್ಲೂ ಹರಡಿಬಿಟ್ಟು, ಸೈನ್ಯದವರಾಗಲೀ ಚಿಕ್ಕ ಗಟ್ಟಲೆಯ ಪಹರೆಯವರಾಗಲೀ, ಸಮಯದಲ್ಲಿ ರಾಜನ ಸಹಾಯಕ್ಕೆ ಒದಗಿ ಬರದಂತೆ ಮಾಡಿಬಿಟ್ಟರು. ಈ ಸಂಧಾನ ವೃತ್ತಾಂತವೆಲ್ಲವೂ ಚಾಮರಾಜ ಒಡೆಯರಿಗೆ ತಿಳಿದು ಬರಲು, ಅವರು ನೇರವಾಗಿ ದೇವರಾಜಯ್ಯನ ಬಳಿಗೆ - 'ಅಯ್ಯಾ, ರಾಜ್ಯಶಕಟಗಳಲ್ಲಿ ನಿಷ್ಕಾರಣವಾಗಿ ಕೆಲವ ಹೆಚ್ಚು ಕಡಮೆಗಳು ನಿಮ್ಮಿಂದ ಮಾಡಲ್ಪಟ್ಟುದರಿಂದ ನಾವು ಈ ಕಾರ್ಯವನ್ನು ನಡೆಯಿಸಬೇಕಾಯಿತು. ನಮಗೆ ಪಟ್ಟವಾದ ತರುವಾಯ ಎಂಟುತಿಂಗಳ ಕಾಲ ನಿಮ್ಮ ಅಭಿಪ್ರಾಯಾನುಸಾರವಾಗಿಯೇ ನಡೆಯಲಿಲ್ಲವೆ! ಈಗಲೂ ನಿಮ್ಮ ಇಷ್ಟಕ್ಕೆ ವಿರೋಧವಾಗಿ ನಡೆಯಬೇಕೆಂಬ ಅಭಿಪ್ರಾಯ ನಮಗಿಲ್ಲ. ಕೆಲವ ಕಾರ್ಯಗಳು ನ್ಯಾಯಸಮ್ಮತವಾಗಿ ನಡೆಯಲಿ. ವ್ಯರ್ಥ ಈ ಮನಃ ಕಲ್ಪನೆಗಳೇಕೆ?'' ಎಂದು ಎಷ್ಟೋ ಬಗೆಯಲ್ಲಿ ಸಮಾಧಾನ ವಾಕ್ಯಗಳನ್ನು ಹೇಳಿ ಕಳುಹಿಸಿದರು. ಆದರೆ ಆ ಮಾತುಗಳಾವುವೂ, ದುರ್ಜನನಾದ ಆತನ ಕಿವಿಗೆ ಬೀಳಲಿಲ್ಲ. ಸ್ವಾಮಿದ್ರೋಹದಲ್ಲೇ ಹೆಚ್ಚು ಮಾಧುರ್ಯವುಳ್ಳವನಾಗಿದ್ದ ಆ ನೀಚನು, 'ರಾಮಬಾಣ' ವೆಂಬ ಹೆಸರಿನ ಆನೆಯಿಂದ ಅರ

ಮನೆಯ ಮಹಾದ್ವಾರವನ್ನು ಮುರಿಸಿ, ದೊರೆಗಳ ಹಸ್ತದಲ್ಲಿದ್ದ ಶಿಬಾಮೊಹರು ಪಟ್ಟದಕತ್ತಿಗಳನ್ನು ಸಿಂಹಾಸನದಮೇಲಿಟ್ಟು ಹಿಂದಿರುಗುವಂತೆ ಬಲವಂತಪಡಿಸಿ, ತರುವಾಯ ಚಾಮರಾಜರನ್ನು ಸಕುಟುಂಬವಾಗಿ ನಿರ್ಬಂಧದಿಂದ ಕಬ್ಬಾಳ ದುರ್ಗದ ಸೆರೆಮನೆಗೆ ಸಾಗಿಸಿ, ಅಲ್ಲಿ ಸೆರೆಯಲ್ಲಿಡಿಸಿದನು.

ಎಷ್ಟು ಉನ್ನತಾಧಿಕಾರದಲ್ಲಿದ್ದರೂ ರಾಜನ ಸೇವಕರಾಗಿರಬೇಕಾದ ಅಧಿಕಾರಿಗಳು, ಒಂದುವೇಳೆ ಪ್ರಬಲಿಸಿದರೆ, ಅದರಿಂದ ರಾಜನಿಗೂ ರಾಜ್ಯಕ್ಕೂ ಎಂತಹ ಪ್ರಮಾದ ಪರಂಪರೆಗಳು ಸಂಭವಿಸುವುವೆಂಬುದನ್ನು ತಿಳಿಸಲಿಕ್ಕಾಗಿ, ಮೇಲಿನ ವೃತ್ತಾಂತವನ್ನು ಸಂಕ್ಷೇಪವಾಗಿ ತಿಳಿಸಲಾಯಿತು. ಈ ಕಾಲದಿಂದ ಪ್ರಾರಂಭವಾದ ಈ ಬಗೆಯ ಅಧಿಕಾರಿಗಳ ನಿರಂಕುಶ ಆಡಳಿತವು ಮೈಸೂರಿನಲ್ಲಿ ಮುಂದೆ ಬಹುಕಾಲದವರೆಗೂ ನಿಲ್ಲಲಿಲ್ಲ. ನಮ್ಮ ಕಥಾನಾಯಿಕೆಯವರ ಕಾಲದಲ್ಲಿ ಪ್ರಾಪ್ತವಾದುದೆಂದು ಗ್ರಂಥ ಪ್ರಾರಂಭದಲ್ಲೇ ಹೇಳಿರುವ ರಾಜ್ಯದ ಪರಾಕ್ರಮಣಕ್ಕೆ ಬೀಜವು ಇಲ್ಲೇ ನಾಟಲ್ಪಟ್ಟುದರಿಂದ ಇಲ್ಲಿಂದ ಆ ಸಂಗತಿಯನ್ನು ಹೇಳಬೇಕಾಯಿತು. ತರುವಾಯ ಕಬ್ಬಾಳದುರ್ಗದ ಸೆರೆಮನೆಗೆ ನಡೆದ ಚಾಮರಾಜರು, ತಮ್ಮನ್ನು ಆ ಸ್ಥಿತಿಗೆ ಗುರಿಮಾಡಿದ ದೇವರಾಜಯ್ಯನ ವಂಶವು ನಾಶವಾಗಲೆಂದು ಶಪಿಸಿ ಮುಂದೆ ಎಂದೋ ಒಂದು ದುರ್ದಿನದಲ್ಲಿ ಅಸುವನ್ನು ನೀಗಿದರಂತೆ; ಅದಂತಿರಲಿ!

ಇತ್ತ ಪುನಃ ಸರ್ವಾಧಿಕಾರಿಯ ಸ್ಥಾನದಲ್ಲಿ ಸ್ವಯಂ ಪ್ರತಿಷ್ಠಿತನಾದ ದಳವಾಯಿ ದೇವರಾಜಯ್ಯನು, ಚಾಮರಾಜರಿಂದ ನಿಯಮಿತರಾಗಿದ್ದ ಅಧಿಕಾರಿಗಳನ್ನೆಲ್ಲಾ ನಿರ್ಬಂಧಗೊಳಿಸಿ, ಆ ಸ್ಥಾನಗಳಿಗೆಲ್ಲ ತನ್ನಜನಗಳನ್ನೇ ನಿಯಮಿಸಿ, ಸಿಂಹಾಸನದಲ್ಲಿ ಒಂದು ಮೂಲ ವಿಗ್ರಹವನ್ನಿರಿಸಬೇಕೆಂಬ ಉದ್ದೇಶದಿಂದ, ದೊಡ್ಡಕೃಷ್ಣರಾಜ ಒಡೆಯರ ಪತ್ನಿಯವರಾದ ದೇವಾಜಮ್ಮಣ್ಣಿಯವರಿಗೆ-ಅವರ ಜ್ಞಾತಿಯಾದ ಚಿಕ್ಕನಹಳ್ಳಿ ಚಾಮೇ ಅರಸಿನವರ, ಮೂರು ವರುಷ ವಯಸ್ಸಿನ ಪುತ್ರರನ್ನು ಸ್ವೀಕಾರಮಾಡಿಸಿ, ಎಂದಿನಂತೆ ರಾಜ್ಯ ವಿಚಾರವನ್ನು ಸರ್ವ ಸ್ವಾತಂತ್ರ್ಯದಿಂದ ತಾನೇ ನೋಡಿಕೊಳ್ಳುತ್ತಿದ್ದನು.

ದೇವಾಜಮ್ಮಣ್ಣಿಯವರು ಮೇಲೆಹೇಳಿದ ಮೂರುವರ್ಷದ ಬಾಲಕನನ್ನು ಇಮ್ಮಡಿ ಕೃಷ್ಣರಾಜ ಒಡೆಯರು ಎಂಬ ನಾಮಧೇಯದಿಂದ ದತ್ತುಮಾಡಿಕೊಂಡು, ಸಿಂಹಾಸನಕ್ಕೆ ಒಂದು ವಿಕ್ಕಿಂದು ವಿಸಾಡಿಸಿದರಾದರೂ,

ಅದರಿಂದ ಆಡಳಿತದಲ್ಲಿ ಯಾವ ಹೆಚ್ಚು ಕಡಮೆಯೂ ನಡೆದಂತಾಗಲಿಲ್ಲ. ಮೂರು ವರ್ಷದ ಆ ಮಗುವು ಪ್ರಬುದ್ಧವಾಗಿ ವಿದ್ಯಾಬುದ್ಧಿಗಳನ್ನು ಕಲಿತು, ರಾಜ್ಯಾಧಿಪತ್ಯಕ್ಕೆ ಯೋಗ್ಯವಾಗುವವರೆಗೆ, ಮಹಾರಾಣಿಯವರೂ ರಾಜ್ಯ ಸಂಬಂಧವಾದ ಸಕಲ ಕಾರ್ಯಗಳಿಗೂ, ಸರ್ವಾಧಿಕಾರಿಗಳ ಕೈ ಕಾಯದೆ, ಅನುಮತಿಯನ್ನು ಕೇಳದೆ, ನಡೆಯಲು ಮುಂದೆ ಮಾರ್ಗವೇ ಇಲ್ಲದಂತಾಯಿತು. ಆದುದರಿಂದ ನಾಮಮಾತ್ರ ರಾಜರಿರುತ್ತಿರಲು, ಸರ್ವಾಧಿಕಾರವು ಮುಂದೂ ಕೆಲವು ಕಾಲ ದೇವರಾಜಯ್ಯನ ಸ್ವಾಧೀನದಲ್ಲಿದ್ದೇ ನಡೆಯಿತು.

ಇಮ್ಮಡಿ ಕೃಷ್ಣರಾಜ ಒಡೆಯರು ಬಾಲ್ಯಾವಸ್ಥೆಯಲ್ಲಿದ್ದು-ರಾಜ್ಯಾಧಿಪತ್ಯವು ಸರ್ವಾಧಿಕಾರಿಗಳ ಮುಷ್ಟಿಯಲ್ಲಡಗಿದ್ದ-ಈ ಸಂದರ್ಭದಲ್ಲೇ, ಮೈಸೂರು ದೇಶದಲ್ಲಿನ ಹಿಂದೂ ರಾಜವಂಶದವರ ಸ್ವಾತಂತ್ರ್ಯದ ಮೂಲೋತ್ಪಾಟನೆಗೇ ಕುಠಾರ ಸ್ವರೂಪನಾಗಿದ್ದ ವ್ಯಕ್ತಿಯೊಬ್ಬನು ಮೈಸೂರು ರಾಜಸೈನ್ಯದಲ್ಲಿ ಬಂದು ಸೇರುವ ಸಂಭವವುಂಟಾಯಿತು. ಈ ವ್ಯಕ್ತಿಯೇ ಹೈದರಲ್ಲೀಖಾನನು. ಈತನು ಬಹು ಬಡತನ ಸ್ಥಿತಿಯಲ್ಲಿ ಹುಟ್ಟಿ, ತಂದೆಯು ಮಾಡಿದ್ದ ಋಣ ಬಾಧೆಯಿಂದ ಅಗಾಧ ಕಷ್ಟನಷ್ಟಗಳಿಗೀಡಾಗಿ, ಕೊನೆಗೆ ದೊರೆಗಳವರ ಅಪ್ಪಣೆಯಂತೆ ಹತ್ತು ಸಾವಿರ ವರಹಗಳು ಭಂಡಾರದಿಂದ ಕೊಡಲ್ಪಡಲು, ಆ ಉಪಕಾರಕ್ಕೆ ಪ್ರತ್ಯುಪಕಾರವಾಗಿ ಮೈಸೂರು ಸೈನ್ಯದಲ್ಲಿ ಸೇವಕನಾಗಿ ಸೇರಿ, ಸ್ವಾಮಿದ್ರೋಹ ಮಾಡದೆ ನಡೆದುಕೊಳ್ಳುವೆನೆಂದು ಪ್ರಮಾಣಮಾಡಿ ಕೆಲಸಮಾಡಿಕೊಂಡಿದ್ದನು.

ಅನ್ಯಾಯವೂ ದುಂದುಗಾರಿಕೆಯೂ ಕಪಟ ವೃತ್ತಿಗಳೂ ಎಷ್ಟು ಕಾಲ ದಕ್ಕುವುವು. ದಳವಾಯಿ ದೇವರಾಜಯ್ಯನು ಪ್ರಾರಂಭದಿಂದಲೂ ಮಾಡುತ್ತಾ ಬಂದ ಹಲವು ದುಷ್ಕೃತ್ಯಗಳು ಪ್ರತಿಫಲಗಳನ್ನು ಕೊಡುವುದಕ್ಕೆ ಆರಂಭವಾಗಲು ಮುಂದೆ ಅವನ ಬಾಳ್ವೆಯು ಬಹು ಕಷ್ಟಕ್ಕೀಡಾಯಿತು. ಈ ವೇಳೆಗೆ ಇಮ್ಮಡಿ ಕೃಷ್ಣರಾಜ ಒಡೆಯರು ವಿದ್ಯಾಬುದ್ಧಿಗಳನ್ನು ಕಲಿತು ಪ್ರಬುದ್ಧರಾಗಿ ರಾಜ್ಯ ವಿಚಾರಗಳನ್ನು ಸ್ವತಃ ನೋಡಿಕೊಳ್ಳಲು ಶಕ್ತಿ ಸಾಮರ್ಥ್ಯಗಳನ್ನು ಗಳಿಸಿದ್ದುದರಿಂದ ಆಗಲೂ ಹಿಂದಿನಂತೆಯೇ, ತಮ್ಮ ಮನ ಬಂದಂತೆ ಕಾರ್ಯಭಾರಗಳನ್ನು ನಡೆಯಿಸುವುದು, ಈ ಅಧಿಕಾರಿಗಳಿಗೆ ಸಾಧ್ಯ

ವಿಲ್ಲವಾಯಿತು. ಅಲ್ಲದೆ, ಅವರು ಮಾಡುತ್ತಿದ್ದ ಸ್ವಾಮಿದ್ರೋಹವೇ ಮುಂತಾದ ವಂಚನೆಯ ವೃತ್ತಾಂತವೆಲ್ಲವೂ ದೊರೆಗಳಿಗೆ ತಿಳಿದುಹೋಯಿತು. ದೊರೆಗಳವರಿಗೆ ಅವರ ವಿಷಯದಲ್ಲಿದ್ದ ನಂಬಿಕೆ ಪ್ರೀತಿ ವಿಶ್ವಾಸಗಳು ತಪ್ಪಿ, ಅವುಗಳ ಸ್ಥಾನದಲ್ಲಿ ಬೇಸರವೂ ದ್ವೇಷವೂ, ಅಪನಂಬಿಕೆಯೂ ಉಂಟಾದುವು. ಹೀಗೆ ಸರ್ವಾಧಿಕಾರಿಯಾದ ದೇವರಾಜಯ್ಯನಿಗೂ ದೊರೆಗಳವರಿಗೂ ಮನಸ್ತಾಪವು ಹುಟ್ಟಿ ಮನಸ್ಸಿನಲ್ಲೇ ಸಾವಕಾಶವಾಗಿ ಬೆಳೆಯುತ್ತಿತ್ತು.

ಹಿಂದೊಂದುವೇಳೆ, ದೊರೆಗಳಾದ ಚಾಮರಾಜ ಒಡೆಯರು ತಮ್ಮ ಮಾರ್ಗಕ್ಕೆ ವಿರೋಧಿಗಳಾಗಿ ಬಂದಿದ್ದಾಗ ಈ ಅಧಿಕಾರಿಗಳು ಅವರನ್ನು ಸಿಂಹಾಸನ ಭ್ರಷ್ಟರನ್ನಾಗಿ ಮಾಡಿದ್ದರಲ್ಲವೆ! ಈಗಲೂ ಹಾಗೇಕೆಮಾಡಿ, ಈ ಕಂಟಕವನ್ನು ನಿವಾರಿಸಿಕೊಳ್ಳಲಾಗದೆಂದು, ದೇವರಾಜಯ್ಯನ ತಮ್ಮನಾದ ನಂಜರಾಜಯ್ಯನು ತಮ್ಮಣ್ಣನಿಗೆ ಪ್ರೇರಿಸಿದನು. ಆದರೆ ಈ ಬಾರಿ, ಪ್ರಾಯ ಸಮರ್ಥರೂ, ಶೌರ್ಯ ಧೈರ್ಯ ನಿಧಿಗಳೂ ಆಗಿದ್ದ ಇಮ್ಮಡಿ ಕೃಷ್ಣರಾಜ ಒಡೆಯರ ಉಜ್ವಲ ತೇಜಸ್ಸು ಅವನ ಎದೆಯಲ್ಲಿ ನಡುಕವನ್ನು ಹುಟ್ಟಿಸಿತು. ದಳವಾಯಿಯು ತಾನು ಆ ಕೆಲಸಮಾಡಲಾರೆನೆಂದು ಹೇಳಲು, ಅಣ್ಣ ತಮ್ಮಂದಿರಿಗೇ ವಿರೋಧವುಂಟಾಯಿತು. ಒಡನೆ ದುರುಳನಾದ ಆ ನಂಜರಾಜಯ್ಯನು, ರಾಜರ ಪಕ್ಷದ ಆಪ್ತಸೇವಕರನ್ನು ವಧಿಸಿ, ರಾಜರನ್ನೂ ಕೈಸೆರೆ ಹಿಡಿಯಬೇಕೆಂಬ ದುರುದ್ದೇಶದಿಂದ ಪ್ರೇರಿತನಾಗಿ, ಅರಮನೆಯ ಎದುರಿಗೆ ನಾಲ್ಕು ಫಿರಂಗಿಗಳನ್ನು ಎತ್ತಿಕಟ್ಟಿಸಿ ಬಾಗಿಲಿಗೆ ಗುಂಡುಗಳನ್ನು ಹೊಡೆಯಿಸಲು ಪ್ರಾರಂಭಿಸಿದನು. ಈ ಸಮಾಚಾರವು ಒಳ ಮಹಲಿನಲ್ಲಿದ್ದ ಮಹಾರಾಜರಿಗೆ ಅರಿಕೆಯಾಗಲು, ಧೀರರಾದ ಅವರು ಒಡನೆ ಆಯುಧ ಹಸ್ತರಾಗಿ ಸಿಂಹಗರ್ಜನೆ ಮಾಡುತ್ತಾ ಹೊರಹೊರಟು, ನಂಜರಾಜಯ್ಯನ ಕಡೆಯ ಹಲವು ಜನಗಳನ್ನು ಸಂಹರಿಸಿ, ಕೆಲವರನ್ನು ಹೊಡೆದೋಡಿಸಿ, ಮಿಕ್ಕವರನ್ನು ಸೆರೆಹಿಡಿಸಿ ಕಿವಿ ಮೂಗುಗಳನ್ನು ಕೊಯಿಸಿ, ಹೀಗೆ ಆ ದೊಂಬಿಯನ್ನು ಅಡಗಿಸಿದರು. ಮಹಾರಾಜರ ಶೌರ್ಯ ಪ್ರತಾಪಗಳು ಹೀಗೆ ಪ್ರಕಟವಾಗಿ ತನ್ನ ಆಟವು ಅವರ ಬಳಿ ಸಾಗಲಾರದೆಂದು ತಿಳಿದ ತರುವಾಯ, ನಂಜರಾಜಯ್ಯನು ಮಾತ್ರವಲ್ಲ-ಅವನ ಅಣ್ಣನಾದ ದೇವರಾಜ

ಯ್ಯನೂ ಬಿದರಿ, ದೇಶಭ್ರಷ್ಟನಾಗಿ ಸತ್ಯಮಂಗಲಕ್ಕೆ ಹೊರಟುಹೋಗಿ ತಲೆ ಮರಸಿಕೊಂಡನು. ಹೀಗೆ ನೆಲೆಗಂಡ ಕಳ್ಳರಂತೆ, ರಾಜಬಂಧುಗಳಾಗಿ ರಾಜಧಾನಿಯಲ್ಲೇ ನೆಲೆಸಿ ಪ್ರಾರಂಭದಿಂದಲೂ ರಾಜವಂಶ ವೃಕ್ಷದ ತಾಯಿ ಬೇರುಗಳನ್ನೇ ಕತ್ತರಿಸತೊಡಗಿದ್ದ ಈ ಘಾತುಕರು, ರಾಜ್ಯಭ್ರಷ್ಟರಾಗಿ ಹೊರಟು ಹೋದುದರಿಂದ, ರಾಜ್ಯವು ನಿಷ್ಕಂಟಕವಾಯಿತು. ಆ ವೇಳೆಗೆ ದಿಂಡಿಗಲ್ಲು ಮುಂತಾದ ದಾಕ್ಷಿಣಾತ್ಯ ಪ್ರಾಂತಗಳನ್ನು ಜಯಿಸಿಕೊಂಡು ಬಂದು, ಸೈನ್ಯವನ್ನು ಬಹು ದರ್ಪದಿಂದ ಸ್ವಾಧೀನಕ್ಕೆ ತಂದುಕೊಂಡು, ಶತ್ರುರಾಜರನ್ನು ಜಯಿಸಿ ತಾನು ತಂದ ಧನ ಧಾನ್ಯಾದಿಗಳಿಂದ ರಾಜ ಭಂಡಾರವನ್ನು ತುಂಬಿ, ಬಹು ಸಮರ್ಥನೆಂದು ಹೆಸರುವಾಸಿಯಾಗಿದ್ದ ಹೈದರಳ್ಳೀಖಾನನಿಗೆ ಇಮ್ಮಡಿ ಕೃಷ್ಣರಾಜ ಒಡೆಯರು, ಬಹದ್ದೂರ್ ಎಂಬ ಬಿರುದನ್ನು ಕೊಟ್ಟು, ದೇವರಾಜಯ್ಯನಿಗಿದ್ದ ದಳವಾಯಿ ಅಧಿಕಾರವನ್ನು ಅತನಿಗೆ ವಹಿಸಿಕೊಟ್ಟು, ಖಂಡೇರಾಯನೆಂಬಾತನನ್ನು ದಿವಾನನನ್ನಾಗಿ ನಿಯಮಿಸಿ ತಾವು ಸರ್ವಕಾರ್ಯಗಳ ಮೇಲ್ವಿಚಾರಣೆಯನ್ನೂ ವಹಿಸಿಕೊಂಡು ಬಹು ಸಮರ್ಥತೆಯಿಂದ ರಾಜ್ಯಪಾಲನೆ ಮಾಡುತ್ತಿದ್ದರು.

ವಿದ್ಯಾವಿನಯ ಸಂಪನ್ನರೂ, ಶೌರ್ಯ ಧೈರ್ಯೌದಾರ್ಯ ಗುಣ ವಿಶಿಷ್ಟರೂ, ಪ್ರಭು ಮಂತ್ರೋತ್ಸಾಹ ಶಕ್ತಿಯುತರೂ, ತೇಜಸ್ವಿಗಳೂ ಆದ ಈ ಪ್ರಭುವರ್ಯರು ರಾಜ್ಯಪರಿಪಾಲನೆ ಮಾಡತೊಡಗಲು, ಸತ್ಯ ಧರ್ಮ ನ್ಯಾಯಗಳಿಗೆ ಚ್ಯುತಿಯಿಲ್ಲದೆ, ಸರ್ವ ಸಮ್ಮತವಾಗಿ ಸಾಗತೊಡಗಿತು. ಮಹಾರಾಜರು ಸತ್ಕುಲ ಪ್ರಸೂತೆಯರಾದ ಮೂವರು ಕನ್ಯೆಯರನ್ನು ವಿವಾಹವಾದರು. ಅವರಲ್ಲಿ ಮೊದಲನೆಯವರು, ಪುಟ್ಟಮ್ಮಣ್ಣಿ ಅಥವ ದೇವಾಜಮ್ಮಣ್ಣಿಯವರು. ಎರಡನೆಯವರು, ಬೇಲೂರು ದೇವಾಜಮ್ಮಣ್ಣಿಯವರು. ಮೂರನೆಯವರೇ, ನಮ್ಮ ಕಥಾನಾಯಿಕೆಯರಾದ ಲಕ್ಷ್ಮಮ್ಮಣ್ಣಿ ಅಥವ ಲಕ್ಷ್ಮಮ್ಮಣ್ಣಿಯವರು.

ಅಧ್ಯಾಯ ೩ "ಕನ್ನಡಿ-ಕಠಾರಿ"

ಮೈಸೂರು ರಾಜವಂಶೀಕರು ಸರ್ವಸ್ವಾತಂತ್ರ್ಯದಿಂದ ರಾಜ್ಯಭಾರಮಾಡುತ್ತಿದ್ದ ಕಾಲದಲ್ಲಿ ಅವರ ಬಳಿ ಅನೇಕಮಂದಿ ಶೂರ ಸರದಾರರು ಪ್ರಸಿದ್ಧರಾಗಿದ್ದರು. ಅವರ ಸಹಾಯದಿಂದ ರಾಜರು, ಶತ್ರುರಾಜರು ತಮ್ಮ ಕಡೆಗೆ ತಿರುಗಿ ನೋಡದಂತೆ ಅರಿಭಯಂಕರರಾಗಿ ತಮ್ಮ ರಾಜ್ಯಕೋಶಗಳನ್ನು ಸುರಕ್ಷಿತವಾಗಿಟ್ಟುಕೊಂಡು ನಿಷ್ಕಂಟಕರಾಗಿದ್ದರು. ಅಷ್ಟು ಮಾತ್ರವಲ್ಲ-ಆಗಾಗ ಸುತ್ತುಮುತ್ತಿನ ರಾಜರುಗಳಮೇಲೆ ದಂಡೆತ್ತಿ ನಡೆದು, ಅವರ ರಾಜ್ಯಕೋಶಾದಿಗಳನ್ನು ಸ್ವಾಧೀನಪಡಿಸಿಕೊಂಡು, ದಿನದಿನಕ್ಕೆ ತಮ್ಮ ರಾಜ್ಯದ ಮೇರೆಯನ್ನು ವಿಸ್ತರಿಸಿಕೊಳ್ಳುತ್ತಲೂ ಇದ್ದುದುಂಟು. ಮೇಲೆ ಹೇಳಿದಂತೆ ಚಾಮರಾಜ ಒಡೆಯರು ರಾಜ್ಯಭಾರ ಮಾಡುತ್ತಿದ್ದ ಕಾಲದಲ್ಲಿ ಮೈಸೂರು ಸೈನ್ಯದಲ್ಲಿ ಕತ್ತಿಗೋಪಾಲರಾಜ ಅರಸರೆಂಬ ಸರದಾರರೊಬ್ಬರು ಸುಪ್ರಸಿದ್ಧರಾಗಿದ್ದರು. ಅವರು ಮಹಾಶೂರರಾಗಿ, ತಮ್ಮ ಸೈನ್ಯವನ್ನು ಅತ್ಯಂತ ಉತ್ತಮ ಸ್ಥಿತಿಯಲ್ಲಿಟ್ಟುಕೊಂಡು, ಅಪ್ರತಿಮ ಯೋಧರೆನ್ನಿಸಿಕೊಂಡು ಶತ್ರುಭೀಕರರಾಗಿದ್ದರು. ಅವರು, ಅನೇಕ ಯುದ್ಧಗಳಲ್ಲಿ ಹೋರಾಡಿದ್ದರಾದರೂ, ತಿರುಚನಾಪಳ್ಳಿಯ ನವಾಬನಾಗಿದ್ದ ಗಳನ[illegible]ದಲ್ಲಿಯಮೇಲೆ ದಂಡೆತ್ತಿ ಹೋಗಿ. ಅಲ್ಲಿ ಅವರು ತೋರಿಸಿದ ಅಸಮ[illegible]ವು ಚಿರಪ್ರಸಿದ್ಧವಾದುದಾಗಿದೆ. ಏಕನಿಷ್ಠೆಯಿಂದ ಸ್ವಾಮಿ ಸೇವಕ[illegible] ಆ ವೀರರ ಧರ್ಮಪತ್ನಿಯಲ್ಲಿ ಕ್ರಿ. ಶ. ೧೭೪೨ನೆಯ ಸಂವತ್ಸರದಲ್ಲಿ [illegible] ಕನ್ಯಾರತ್ನವು ಉದಯಿಸಿತು. ಮಾನಸ ಸರೋವರದಲ್ಲಿ ಹುಟ್ಟಿದ [illegible]ಪುಷ್ಪವು ದಿನದಿನಕ್ಕೆ ಹೆಚ್ಚು ಹೆಚ್ಚಾಗಿ ವಿಕಸಿತವಾಗಿ. ಕಳಕಳನೆಂದು [illegible]ತ್ರಾನಂದಕರವಾಗಿ ಬೆಳಗುವಂತೆ, ಗೋಪಾಲರಾಜ ಅರಸರ ಆ ಧರ್ಮಪತ್ನಿಯ ಗರ್ಭಸುಧಾಂಬುಧಿಯಲ್ಲಿ ಜನಿಸಿದ ಈ ಕನ್ಯಾರತ್ನವೂ ದಿನ ದಿನಕ್ಕೆ, ಗಳಿಗೆ ಗಳಿಗೆಗೆ, ಕ್ಷಣ ಕ್ಷಣಕ್ಕೆ ಬೆಳೆಯುತ್ತಾ ಮಾತಾಪಿತೃಗಳಿಗೂ ಬಂಧು ಬಾಂಧವರಿಗೂ ನೆರೆಹೊರೆಯವರಿಗೂ ತನ್ನ ಬಾಲ ಲೀಲೆಗಳಿಂದ ಪರಮಾನಂದವನ್ನುಂಟುಮಾಡುತ್ತಾ, ಅಭಿವೃದ್ಧಿಯಾಗುತ್ತಿದ್ದಿತು. ಶುಕ್ಲಪಕ್ಷದ ಚಂದ್ರಕಾಂತಿಯಂತೆ ದಿನದಿನಕ್ಕೂ ಕಳೆಯೇರಿ ಬೆಳೆಯುತ್ತಿದ್ದ

ಆ ತಮ್ಮ ಮುದ್ದು ಕುವರಿಯನ್ನು, ವಿವಿಧ ವಸ್ತ್ರಾಭರಣಗಳಿಂದ ಸಿಂಗರಿಸಿ ಆ ದಂಪತಿಗಳು ಸಂತೋಷ ಸಾಗರದಲ್ಲಿ ಮುಳುಗಿರುತ್ತಿದ್ದರು. ಸರ್ವಾಂಗ ಸುಂದರಳಾಗಿದ್ದ ಆ ಕನ್ಯೆಯಾದರೂ ತನಗಿಟ್ಟಿದ್ದ ಲಕ್ಷ್ಮಮ್ಮಣ್ಣಿ ಎಂಬ ನಾಮಧೇಯಕ್ಕೆ ಶತಾಂಶದಿಂದ ಅನ್ವರ್ಥತೆಯನ್ನುಂಟುಮಾಡಿದ್ದಳು.

ಸತ್ಕುಲ ಪ್ರಸೂತರೂ, ಸುಗುಣಯುತರೂ ಆದ ದಾದಿಯರ ಲಾಲನೆ ಪಾಲನೆಗಳಲ್ಲಿ ಬಾಲ್ಯವನ್ನು ಕಳೆದು, ಬಾಲಿಕಾ ಮಣಿಯಾದ ಲಕ್ಷ್ಮಮ್ಮಣ್ಣಿಯು ಸಂಗೀತ ಸಾಹಿತ್ಯ ಚಿತ್ರಕಲೆ ಕಸೂತಿ ರಂಗವಲ್ಲಿ ಮುಂತಾದ ಸಮಸ್ತ ಕುಶಲ ಕಲೆಗಳಲ್ಲೂ ಪ್ರೌಢಿಮೆಯನ್ನು ಸಂಪಾದಿಸಿದಳು. ಮಾತ್ರವಲ್ಲ, ನಾರೀಕುಲಕ್ಕೆ ಭೂಷಣ ಪ್ರದಗಳಾದ ನಯವಿನಯಾದಿಗಳೂ ಶೃಂಗಾರ ಗಾಂಭೀರ್ಯಾದಿಗಳೂ ಆಕೆಯಲ್ಲಿ ಮನೆಮಾಡಿಕೊಂಡಿದ್ದುವು. ದಯೆ ಮಮತೆ ಮೃದು ನುಡಿಗಳು ಆಕೆಯಲ್ಲೇ ಜನ್ಮವೆತ್ತಿದ್ದುವೆನ್ನಬಹುದು. ಆ ಕನ್ಯಕಾಮಣಿಯು ಒಂದು ದಿನಕ್ಕೆ ಕೋಪಿಸಿಕೊಂಡವಳಲ್ಲ, ಒಂದು ದಿನಕ್ಕೆ ದಾದಿಯರನ್ನಾಗಲೀ ಸೇವಕರನ್ನಾಗಲೀ ಗದರಿಸಿಕೊಂಡವಳಲ್ಲ. ಒಂದು ದಿನಕ್ಕಾದರೂ, ಯಾವ ಪ್ರಾಣಿಯನ್ನೂ ಹಿಂಸಿಸಿ, ಬಾಧಿಸಿ, ನೋಯಿಸಿ ಅರಿತವಳಲ್ಲ. ಬಡವರು ಭಿಕ್ಷುಕರು ಅಂಗವಿಹೀನರು ಮುಂತಾದವರ ವಿಷಯದಲ್ಲಿ ಆ ಮೃದು ಹೃದಯಳು ಎದೆಕರಗಿ ತನಗೆಂದು ಏನನ್ನೂ ಇರಿಸಿಕೊಳ್ಳದೆ ಅವರಿಗಿತ್ತು ಅವರ ಮನಸ್ಸನ್ನು ಸಂತೋಷಪಡಿಸುತ್ತಿದ್ದದುಂಟು. ಆಕೆಯು ಸೇವೆಗೆಂದರೆ, ಅರಮನೆಯ ದಾದಿಯರು ನಾನು ಮುಂದು ಮುಂದೆ ಬಂದು, ಹೇಳಿದ ಕೆಲಸವನ್ನು ಶಿರಸಾವಹಿಸಿ ಮಾಡು[illegible] ಅವರ ಮಂದಹಾಸಯುಕ್ತ ಮುಖಕಮಲವು ಸರ್ವರ ಮನಸ್ಸನ್ನು ಸ್ವಾಧೀನಪಡಿಸಿಕೊಂಡು ಅವರ ಹೃದಯವನ್ನು ಗೆದ್ದುಕೊಳ್ಳುವಲ್ಲಿ ಎಂದೂ ಅಪಜಯ ಹೊಂದಿದುದಿಲ್ಲ.

ಹೀಗೆ ಸದ್ಗುಣಮಣಿ ಭೂಷಣಗಳಿಂದ ಅಲಂಕೃತಳಾಗಿದ್ದ ತಮ್ಮ ಮಗಳಾದ ಕನ್ಯಾಶಿರೋಮಣಿ ಲಕ್ಷ್ಮಮ್ಮಣ್ಣಿಯು ವಿವಾಹ ಯೋಗ್ಯ ವಯಸ್ಕಳಾಗಲು, ಆಕೆಗೆ ಅನುರೂಪ ವರನು ಯಾರೋ, ಆತನನ್ನು [illegible] [illegible] ಎಂದು ಮುಂತಾಗಿ ಗೋಪಾಲರಾಜ ಅರಸರು [illegible] ಚಿಂತಾಕ್ರಾಂತರಾಗಿದ್ದರು. ಆದರೆ, ಈ ವಿಚಾರದಲ್ಲಿ ಅವರು ವಿಶೇಷ ಪರಿ

ಬಹು ಗೋಪ್ಯವಾಗಿ ಪತ್ರ ವ್ಯವಹಾರವನ್ನು ನಡೆಯಿಸಸಾಗಿದರು. ಮೈಸೂರು ರಾಜ್ಯವನ್ನು ಮಹಮ್ಮದೀಯರ ಕೈಗೆ ಜಾರದಂತೆ ದಕ್ಕಿಸಿಕೊಳ್ಳುವ ನಿಮಿತ್ತವಾಗಿ ಆಕೆಯು ಇಂಗ್ಲೀಷ್ ಪ್ರಭುತ್ವದವರ ಸಹಾಯವನ್ನು ಕೇಳುವುದಕ್ಕಾಗಿಯೂ ಆ ಸಂಬಂಧ ಕೆಲಸ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿಯೂ ತಿರುಮಲರಾಯನೆಂಬ ಒಬ್ಬ ಬ್ರಾಹ್ಮಣ ವಕೀಲನನ್ನು ಮದರಾಸಿಗೆ ಕಳುಹಿಸಿದರು. ಅಂತಃಪುರವನ್ನು ಬಿಟ್ಟು ಹೊರಕ್ಕೆ ಬಂದರಿಯದ ಒಬ್ಬ ರಾಜಸ್ತ್ರೀಯು, ರಾಜ್ಯದಲ್ಲಿ ಹೆಚ್ಚಿ ಹೋಗುತ್ತಿದ್ದ ಶತ್ರು ಪ್ರಾಬಲ್ಯವನ್ನು ನಿರ್ಮೂಲಗೊಳಿಸಲೆಳಸಿ, ಕೈಕೊಂಡ ಈ ಸಾಹಸ ಕಾರ್ಯವು ಪ್ರಶಂಸಾರ್ಹವಾಗಿರುವುದು. ಆ ಕಾಲದಲ್ಲಿ ಆಕೆಯು ತಿರುಮಲರಾಯನಿಗೆ ಬರೆಸಿ ಕಳುಹಿಸುತ್ತಿದ್ದ ಕಾಗದಗಳ ಮೇಲಿನಿಂದ ಆಕೆಗಿದ್ದ ರಾಜ್ಯಕಾರ್ಯ ಧುರಂಧರತ್ವವನ್ನು ತಿಳಿಯಬಹುದು. ತಿರುಮಲರಾಯನಿಗೆ ಬರೆಸಿದ ಬಂದಾದೊಂದು ಪತ್ರದಲ್ಲಿ—"ನೀವು ಲೇಶಮಾತ್ರವೂ ಆಲಸ್ಯಮಾಡದೆ ಈ ನಿಮಿಷವೇ ಪ್ರಯಾಣಮಾಡಿ, ಮದರಾಸನ್ನು ಸೇರಿ, ಅಲ್ಲಿ ಲಾರ್ಡ್‌ಪಿಂಗಾಟು ದೊರೆಯನ್ನು ಸಂದರ್ಶಿಸಿ, ಪುನಃ ನಮ್ಮ ರಾಜ್ಯಪ್ರಾಪ್ತಿಗೆ ಸಾಧಕವಾದ ವಿಚಾರಗಳನ್ನು ಉಚಿತವಾದ ಮಾತುಗಳಿಂದ ಆತನೊಡನೆ ಚರ್ಚಿಸಬೇಕು. ಅವರ ಸೈನ್ಯದ ಖರ್ಚಿಗಾಗಿ ಒಂದು ಕೋಟಿ ರೂಪಾಯಿಗಳನ್ನೂ, ದರ್ಬಾರು ಖರ್ಚಿಗಾಗಿ ಮೂರು ಲಕ್ಷ ರೂಪಾಯಿಗಳನ್ನೂ ಕೊಡುವುದಕ್ಕೆ ನಾವು ಸಿದ್ಧರಾಗಿದ್ದೇವೆಂಬ ವಿಚಾರವನ್ನು ಅವರಿಗೆ ಸ್ಪಷ್ಟವಾಗಿ ತಿಳಿಸಿರಿ. ಪಿಂಗಾಟು ದೊರೆಗೆ ನಾವು ಪ್ರತ್ಯೇಕವಾಗಿ ಬರೆದಿರುವ ಪತ್ರದಲ್ಲಿ ನೀವು ನಮ್ಮ ಕಡೆಯ ಪ್ರತಿನಿಧಿಯೆಂದೂ ಸಮಯಾನುಸಾರವಾಗಿ ರಾಜಕಾರ್ಯವನ್ನು ಕುರಿತು ಸಂಧಿಮಾಡಿಕೊಳ್ಳುವುದಕ್ಕೂ ನಿಮಗೆ ಸ್ವಾತಂತ್ರ್ಯವನ್ನು ವಹಿಸಿದ್ದೇವೆಂದೂ ತಿಳಿಸಿದ್ದೇವೆ. ನೀವು ಯಾವುದಾದರೊಂದು ಮಾರ್ಗದಿಂದ ಭಗೀರಥ ಪ್ರಯತ್ನಮಾಡಿ ರಾಜ್ಯವನ್ನು ಪುನಃ ನಮ್ಮ ರಾಜವಂಶಕ್ಕೆ ಗಳಿಸಿಕೊಡುವಿರಾದರೆ ರಾಜ್ಯಾದಾಯದಲ್ಲಿ ನಿಮಗೆ ಶೇಕಡಾ ೧೦ರಂತೆ ಬಹುಮಾನ ಕೊಡುವುದಲ್ಲದೆ, ವಂಶಪಾರಂಪರ್ಯವಾಗಿ ಸಂಸ್ಥಾನದ ದಿವಾನಗಿರಿಯನ್ನೇ ನಿಮಗೆ ವಹಿಸುತ್ತೇವೆ" ಎಂದು ಬರೆಸಿದ್ದರು.

ಈ ಪತ್ರವನ್ನು ಅನುಸರಿಸಿ ವಕೀಲ ತಿರುಮಲರಾವು ಮದರಾಸಿನಲ್ಲಿ ಗವರ್ನರನ್ನು ಕಂಡು, ಮೈಸೂರಿನ ರಾಜಕಾರ್ಯವನ್ನು ಕುರಿತು ಪ್ರಸ್ತಾಪ ನಡೆಸಿದನು. ಆದರೆ ಒಂದು ತೀರ್ಮಾನಕ್ಕೆ ಬರುವ ವೇಳೆಗೆ ಗವರ್ನರಾದ ಆ ಪಿಂಗಾಟು ದೊರೆಯು ವಿಷಯದಲ್ಲಿ ಕಂಪೆನಿಯವರಿಗೆ ಏನೋ ಅಸಮಾಧಾನವುಂಟಾದುದರಿಂದ ಆತನನ್ನು ವಾಪಸು ಕರೆಸಿಕೊಂಡರು. ಈ ಕಾರಣದಿಂದ ಅವರಿಗೆ ತಿರುಮಲರಾವು ಮಾಡಿದ ಪ್ರಯತ್ನವೆಲ್ಲವೂ ವ್ಯರ್ಥವಾಯಿತು. ಮುಂದೆ ಮಾಡುವ ಕಾರ್ಯವಿಂಥದೆಂದು ತೋರದೆ ಆತನು ಕೆಲ ಕಾಲ ತಂಜಾವೂರಿನಲ್ಲಿ ವಾಸಮಾಡಿಕೊಂಡಿದ್ದನು.

ಇತ್ತ ಹೈದರನ ಪ್ರಾಬಲ್ಯವು ದಿನದಿನಕ್ಕೆ ಹೆಚ್ಚುತ್ತಲೇ ಇದ್ದಿತು. ಆತನು ತನ್ನ ಅಪಾರ ಸೈನ್ಯ ಸಹಾಯ ಬಲದಿಂದ ಮದ್ರಾಸಿನಮೇಲೆ ದಂಡೆತ್ತಿ ನಡೆದು ಇಂಗ್ಲೀಷರನ್ನೇ ಈ ದೇಶದಿಂದ ಓಡಿಸಬೇಕೆಂದು ಪ್ರಯತ್ನಿಸಿದನು. ಈ ಸಂಗತಿಯು, ಮದರಾಸಿನ ಗವರ್ನರಾಗಿ ಬಂದ ಲಾರ್ಡ್ ಮ್ಯಾಕರ್ಟ್ನೆ ಎಂಬಾತನಿಗೆ ತಿಳಿಯಿತು. ಸಮೀಪದಲ್ಲೇ ಅಂತಹ ಪ್ರಬಲ ಶತ್ರುವನ್ನಿಟ್ಟುಕೊಂಡು ಉದಾಸೀನತೆಯಿಂದಿರುವುದು ಅಪಾಯವೆಂದೆಣಿಸಿ, ಆತನು ಪ್ರತೀಕಾರೋಪಾಯವನ್ನು ಕುರಿತು ಯೋಚಿಸತೊಡಗಿದನು. ಆ ಕಾಲಕ್ಕೆ ಪುನಃ ತಿರುಮಲರಾಯನು ಆತನನ್ನು ಸಂದರ್ಶಿಸಿ, ಮಹಾರಾಣಿ ಲಕ್ಷ್ಮಮ್ಮಣ್ಣಿಯ ಕೋರಿಕೆಯನ್ನು ಶ್ರುತಪಡಿಸಿದನು. ದಿನದಿನಕ್ಕೆ ಪ್ರಬಲಿಸುತ್ತಿದ್ದ ಹೈದರನಮೇಲೆ ತಾನೇ ಸ್ವತಂತ್ರಿಸಿ ನಿಂತು ಯುದ್ಧಮಾಡುವುದಕ್ಕಿಂತಲೂ, ಲಕ್ಷ್ಮಮ್ಮಣ್ಣಿಯವರ ಸಹಾಯಗೊಂಡು ಅವನನ್ನು ಎದುರಿಸುವುದು ಉಚಿತವೆಂದು ಆತನು ಯೋಚಿಸಿದನು. ತರುವಾಯ ಸಾವಕಾಶಮಾಡದೆ, ಆಗ ತಂಜಾವೂರಿನಲ್ಲಿ ರೆಸಿಡೆಂಟಾಗಿದ್ದ ಸಲ್ಲಿವನ್ ಎಂಬ ಸರದಾರನನ್ನು ಆ ಕೆಲಸಕ್ಕಾಗಿ ನಿಯಮಿಸಿದನು. ೧೭೮೨ನೆಯ ಸಂವತ್ಸರದ ಅಕ್ಟೋಬರು ೨೮ನೆಯ ದಿನ ತಿರುಮಲರಾಯನಿಗೂ ಸಲ್ಲಿವನ್ ದೊರೆಗೂ ಸಂಧಿಯಾಯಿತು. ಅದೇ ಸಂವತ್ಸರದ ನವಂಬರು ೨೭ರಲ್ಲಿ ಮದರಾಸು ಗೌರ್ನರು ಆ ಸಂಧಿಯ ಷರತ್ತುಗಳಿಗೆ ಒಪ್ಪಿದರು. ಆಗಿನ ಸಂದರ್ಭದಲ್ಲಿ ಇಂಗ್ಲಿಷರ ಸಹಾಯವಿಲ್ಲದೆ ರಾಜ್ಯವು ತಮಗೆ ದಕ್ಕುವ [illegible] ಇಲ್ಲದಿದ್ದುದರಿಂದ ಮಹಾರಾಣಿ ಲಕ್ಷ್ಮಮ್ಮಣ್ಣಿಯವರೂ, ಆ ಕರಾರಿಗೆ

ತಮ್ಮ ಸಮ್ಮತಿಯನ್ನಿತ್ತರು. ಹೀಗೆ ಎಲ್ಲವೂ ಸಿದ್ಧವಾಯಿತು. ಇಂಗ್ಲೀಷರು, ಸೈನ್ಯ ಸರಂಜಾಮುಗಳನ್ನು ಸಿದ್ಧಗೊಳಿಸಿಕೊಂಡು, ಮೈಸೂರನ್ನು ಬಂಧ ಮುಕ್ತ ಮಾಡಲು ಕೃತಸಂಕಲ್ಪರಾದರು. ಆ ಸಂದರ್ಭದಲ್ಲೇ ಅವರಿಗೆ ಮತ್ತಷ್ಟು ಉತ್ಸಾಹ ಜನಕವಾಗಿರುವಂತೆ, ಮಹಾರಾಣಿಯವರು ಮತ್ತೊಂದು ಪತ್ರವನ್ನೂ ಬರೆಸಿದರು. ಅದರಲ್ಲಿ ಈಗ ಅವರು ಮಾಡುವ ಉಪಕಾರಕ್ಕೆ ಪ್ರತ್ಯುಪಕಾರವಾಗಿ, ಸಂವತ್ಸರಕ್ಕೆ ೭೫ ಲಕ್ಷ ರೂಪಾಯಿಯ ಕಪ್ಪವನ್ನೂ. ೧೫ ಲಕ್ಷ ರೂಪಾಯಿಯ ದೇಶವನ್ನೂ ಇಂಗ್ಲೀಷರಿಗೆ ಕೊಡುತ್ತೇವೆಂದು ಒಕ್ಕಣೆಯಿತ್ತು. ಇಂಗ್ಲೀಷಿನವರ ಸೈನ್ಯವು ಸಮೀಪಕ್ಕೆ ಬಂದೊಡನೆಯೇ ಶ್ರೀರಂಗಪಟ್ಟಣದಲ್ಲಿದ್ದ ರಾಣಿಯ ಪಕ್ಷದವರಾದ ಸೈನ್ಯದವರೆಲ್ಲರೂ ಹೈದರನ ಸೈನ್ಯದಮೇಲೆ ತಿರುಗಿ ಬೀಳಬೇಕೆಂದೂ, ಹೀಗೆ ಒಳದೇಶ ಹೊರದೇಶಗಳೆರಡರಿಂದಲೂ ಶತ್ರುಸೈನ್ಯದಮೇಲೆ ತಿರುಗಿಬಿದ್ದು ಅದನ್ನು ಹಣ್ಣಿಗೆ ತರಬೇಕೆಂಬುದೂ ಅವರ ಅಭಿಪ್ರಾಯವಾಗಿದ್ದಿತು. ಆಗ ಶ್ರೀರಂಗಪಟ್ಟಣದಲ್ಲಿ ಅಧಿಕಾರದಲ್ಲಿದ್ದ ಶಾಮಯ್ಯ ಎಂಬ ಶೂರನಾದ ಸರದಾರನೊಬ್ಬನು, ರಾಣಿಯವರ ಈ ಕಾರ್ಯಕ್ಕೆ ಅನುಕೂಲನಾಗಿದ್ದನು. ರಾಣಿಯವರು, ಶ್ರೀರಂಗಪಟ್ಟಣದಲ್ಲಿ ತಮ್ಮ ಕಡೆಯಿಂದ ನಡೆಯಬೇಕಾದ ಕಾರ್ಯಗಳಿಗೆಲ್ಲ ಈ ಶಾಮಯ್ಯನನ್ನೇ ಅಧಿಪತಿಯನ್ನಾಗಿ ನಿಯಮಿಸಿದರು. ಮತ್ತು ಈ ಸಂಗತಿಯನ್ನು ಕುರಿತು, ತಿರುಮಲರಾಯನಿಗೆ ಒಂದು ಪತ್ರವನ್ನೂ ಬರೆಯಿಸಿದರು. ಅದರಲ್ಲಿ-'ಶ್ರೀರಂಗಪಟ್ಟಣದಲ್ಲಿರುವ ಸರದಾರ ಶಾಮಯ್ಯನೂ ಇತರ ಕೆಲಮಂದಿ ಅಧಿಕಾರಿಗಳೂ ನಮಗೆ ಅನುಕೂಲರಾಗಿದ್ದಾರೆ. ಆದುದರಿಂದ ಇಂಗ್ಲೀಷು ಸೈನ್ಯವು ಇಲ್ಲಿಗೆ ಬಂದೊಡನೆಯೇ ನಾವು ವಿಶೇಷ ಪ್ರಯಾಸವಿಲ್ಲದೆಯೇ, ಧನಾಗಾರವನ್ನೂ ಕೋಟೆಯನ್ನೂ ವಶಪಡಿಸಿಕೊಳ್ಳಬಹುದು. ಆದುದರಿಂದ ನೀವು ಗಜ್ಜಲಹಟ್ಟಿ ಕಾವೇರಿಪುರದ ಮಾರ್ಗವಾಗಿ, ಇಂಗ್ಲೀಷು ಸೇನೆಯನ್ನು ಅತಿ ತ್ವರಿತವಾಗಿ ಕಳುಹಿಸುವುದು" ಎಂದಿತ್ತು'.

ಹೀಗೆ ಎಲ್ಲವೂ ಒಂದು ಸುಮುಖ ಸ್ಥಿತಿಗೆ ಬಂದಿದ್ದ ವೇಳೆಯಲ್ಲಿ ರಾಣಿಯವರ ಒಬ್ಬ ಸೇವಕನು ಸ್ವಾಮಿದ್ರೋಹಿಯಾಗಿ ಒಡನೆ ಈ ಸಂಗತಿಗಳನ್ನೆಲ್ಲ ಹೈದರನಿಗೆ ತಿಳಿಯಪಡಿಸಿದನು. ಆ ಸಂಗತಿಯನ್ನು ಕೇಳಿದ ಹೈದ

ದನು, ಮಹಾ ಕ್ರೋಧಾವೇಶ ಪರವಶನಾಗಿ, ೧೭೮೩ನೆಯ ಜುಲೈ ೨೩ನೆಯ ದಿನ ರಾಣಿಯವರ ಆಪ್ತವರ್ಗಕ್ಕೆ ಸೇರಿದವರೆಂದು ಸಂಶಯ ತೋರಿದ ಜನಗಳನ್ನೆಲ್ಲಾ ಹಿಡಿಸಿ ನಿರ್ಬಂಧದಲ್ಲಿರಿಸಿದನು. ಕೆಲವರನ್ನು ಕೊಲ್ಲಿಸಿದನು. ಮಿಕ್ಕ ಕೆಲವರಿಗೆ ಕಿವಿ ಮೂಗುಗಳನ್ನು ಕೊಯಿಸಿದನು. ತಮ್ಮ ಕಾರ್ಯಕ್ಕೆ ಮಧ್ಯದಲ್ಲಿ ಹೀಗೆ ಅನಿರೀಕ್ಷಿತವಾದ ವಿಘ್ನವುಂಟಾದರೂ ರಾಣಿಯವರು ಅದಕ್ಕಾಗಿ ಧೈರ್ಯಗೆಟ್ಟು ಹಿಂಜರಿದು ಕೂಡದೆ, ಹೈದರ್ ಮತ್ತು ಟಿಪ್ಪು ಇವರ ಸಂಪೂರ್ಣ ವಿನಾಶಕ್ಕೇ ಪ್ರಯತ್ನಮಾಡತೊಡಗಿದರು. ಅಬಲೆಯಾಗಿದ್ದರೂ ಆ ಕಾಲದಲ್ಲಿ ರಾಣಿಯವರು ಪ್ರಕಾಶಪಡಿಸದ ಧೈರ್ಯವು ಸಾಮಾನ್ಯವಾದುದಲ್ಲ. ಹೈದರನ ಸೈನ್ಯ ಸಹಾಯವೂ, ಟಿಪ್ಪುವಿನ ಶೌರ್ಯ ಪ್ರತಾಪಗಳೂ ಆಗ್ಗೆ ಇಂಗ್ಲೀಷಿನವರಿಗೆ ಸಹ ಭಯಪ್ರದವಾಗಿದ್ದುವು. ಟಿಪ್ಪುವನ್ನು ಅವರು 'ಮೈಸೂರು ಹುಲಿ' ಎಂದುಕೊಂಡು, ಅಂತಹ ಶೂರನನ್ನು ನಾವು ಯುದ್ಧದಲ್ಲಿ ಜಯಿಸಬಲ್ಲೆವೆ ಎಂದು ಶಂಕೆಗೊಂಡಿದ್ದರು. ಹೀಗೆ ಮಹಾ ಶೂರರಿಗೇ ಎದೆನಡುಗುವಂತಹ ದುಸ್ತರ ಸಮಯದಲ್ಲೂ, ಆ ವೃದ್ಧರಾಣಿಯವರು ಶತ್ರುಗಳನ್ನು ನಾಶಗೊಳಿಸಿ ತಮ್ಮ ಪಿತ್ರಾರ್ಜಿತವಾದ ರಾಜ್ಯವನ್ನು ಪುನಃ ಸಂಪಾದಿಸುವೆವೆಂದು ಮಾಡುತ್ತಿದ್ದ ಪ್ರಯತ್ನವು ಅವರ ಮನೋಸಾಮರ್ಥ್ಯವನ್ನೂ ಸ್ವದೇಶಾಭಿಮಾನವನ್ನೂ ವ್ಯಕ್ತಗೊಳಿಸುತ್ತದೆ. ೧೭೮೦ನೆಯ ಸಂವತ್ಸರದಲ್ಲೊಂದುವೇಳೆ, ಇವರು ಜನರಲ್ ಮೆಡೋಸ್ ಎಂಬ ಸರದಾರನಿಗೆ ಉತ್ಸಾಹಪ್ರದವಾದ ಒಂದು ಪತ್ರವನ್ನು ಬರೆದರು. ಅದಕ್ಕೆ ಪ್ರತ್ಯುತ್ತರವಾಗಿ ಆತನಿಂದ ಬಂದ ಪತ್ರವು ಸಂಪೂರ್ಣ ನಿರುತ್ಸಾಹಜನಕವಾಗಿತ್ತು. -"ಟಿಪ್ಪುವು ಎಂದು ನಶಿಸುವನೋ, ದೇಶವೆಂದು ಶತ್ರು ನಿರ್ಮುಕ್ತವಾಗಿ ನಿಮ್ಮ ಕೈ ಸೇರುವುದೋ ಪರಮೇಶ್ವರನಿಗೇ ಗೊತ್ತು! ವಿಜಯ ಪ್ರಾಪ್ತಿಯು ಪರಮೇಶ್ವರಾಧೀನದ ಮಾತು. - ನಮಗೆ ದೇವರು ಯಶಸ್ಸಾಮರ್ಥ್ಯಗಳನ್ನು ಕೊಟ್ಟರೆ, ಯೋಗ್ಯವೆಂದು ತೋಚಿದರೆ-ನಾವು ಅತ್ಯಾನಂದದಿಂದ ಮೈಸೂರು ರಾಜ್ಯವನ್ನು ನಿಮಗೆ ಸಮರ್ಪಿಸುವೆವು. ರಾಜ್ಯವನ್ನು ಯಾರು ಯಾರು ಹೇಗೆ ವಿಭಾಗಿಸಿಕೊಳ್ಳಬೇಕೆಂಬ ಸಂಗತಿಯನ್ನು ಕಾಲವೇ ಈಗ ನಿಶ್ಚಯಿಸಿ ಹೇಳಲೂ ಸಾಧ್ಯವಿಲ್ಲ. ಮರಾಠೆಯವರೂ, ನಿಜಾಮನೂ

ನಮಗೆ ಮಿತ್ರರಾದುದರಿಂದ ಅವರ ಆಲೋಚನೆಯನ್ನು ಅನುಸರಿಸಿ ಆ ಕಾರ್ಯವನ್ನು ಕುರಿತು ಯೋಚಿಸಬೇಕಾಗುತ್ತದೆ. ಸಂಪೂರ್ಣ ಯುದ್ಧ ವ್ಯಯವನ್ನೂ, ಗೆದ್ದ ತರುವಾಯ ಸೈನಿಕರಿಗೆ ಬಹುಮಾನಗಳನ್ನೂ ಕೊಡುತ್ತೇವೆಂದು ನೀವು ಬರೆಸಿದ್ದೀರಿ. ಇದು ಬಹು ಯುಕ್ತವಾದ ಕಾರ್ಯವೇ' ಹೀಗೆಂದು ಆ ಪತ್ರದಲ್ಲಿದ್ದಿತು.

ಯಾರನ್ನು ಪೀಠಾಗ್ರೇಸರರೆಂದು ಆಶ್ರಯಗೊಂಡು, ಅವರ ಸಹಾಯದಿಂದ ತಮ್ಮ ಶತ್ರುವನ್ನು ವಧಿಸಿ ಕಾರ್ಯಸಾಧನೆ ಮಾಡಬಹುದೆಂದು ಬೆಟ್ಟದಷ್ಟು ಆಸೆಯನ್ನಿಟ್ಟುಕೊಂಡಿದ್ದರೋ, ಅಂತಹ ಇಂಗ್ಲೀಷು ಸರ್ದಾರರಿಂದ ಇಂತಹ ಪುಡಿಮಾತುಗಳ ಪ್ರತ್ಯುತ್ತರ ಬಂದರೆ, ಮಹಾರಾಣಿಯವರು ಇನ್ನು ಹೇಗೆತಾನೇ ಧೈರ್ಯವಾಗಿರಲು ಸಾಧ್ಯವಾದೀತು! ಆದರೂ ಆಕೆಯು ಅಧೈರ್ಯಗೊಳ್ಳಲಿಲ್ಲ-ಎದೆನಡುಗಲಿಲ್ಲ. ರಾಣಿಯವರು, ಇಂತಹ ನಿರುತ್ಸಾಹ ಸಂದರ್ಭದಲ್ಲೂ 'ಸತ್ಯಮೇವ ಜಯತೇ' ಎಂಬ ದೃಢನಂಬಿಕೆಯಿಂದಲೇ ಕಾರ್ಯಗಳನ್ನು ನಡೆಸುತ್ತಿದ್ದರು.

ರಾಜಕಾರ್ಯವು ಇಷ್ಟುಮಟ್ಟಿನ ಇಕ್ಕಟ್ಟಿನ ಸ್ಥಿತಿಯಲ್ಲಿದ್ದಾಗಲೇ ಹೈದರಾಲಿಯು ಕಲ್ಲೀಕೋಟೆಯ ಪ್ರಾಂತದಲ್ಲಿ ಪುಂಡೆದ್ದ ನಾಯಿಮಾರರನ್ನು ಅಡಗಿಸಬೇಕೆಂದು ತನ್ನ ಮಗ ಟಿಪ್ಪುಸುಲ್ತಾನನನ್ನು ಸೈನ್ಯಸಮೇತ ಆ ಪ್ರಾಂತಕ್ಕೆ ಕಳುಹಿಸಿದನು. ಮುಂದೆ ಒಂದೆರಡು ತಿಂಗಳೊಳಗಾಗಿಯೇ ಆತನಿಗೆ ಬೆನ್ನುಫಣಿ ಎಂಬ ವ್ರಣಬಾಧ್ಯವು ಸಂಭವಿಸಿ ಬಹಳ ಉಪದ್ರವಕಾರಿಯಾಗಿ ಪರಿಣಮಿಸಿತು. ದಿನದಿನಕ್ಕೆ ರೋಗಬಾಧೆಯು ಬಲವಾಗುತ್ತಿರಲು ನವಾಬನು ಇನ್ನು ತನ್ನ ದೇಹವುಳಿಯುವುದಿಲ್ಲವೆಂದು ತಿಳಿದವನಾಗಿ ತನ್ನ ಆಪ್ತ ಅಧಿಕಾರಿಗಳಾದ, ಅಬೂಮಹಮ್ಮದ್ ಮಿರ್ದೆ, ತೋಷೇಖಾನೆ ಕೃಷ್ಣರಾಯ, ಪೂರ್ಣಯ್ಯನವರು, ಅಂಚೆ ಶಾಮಯ್ಯ, ಮೀರ್ ಮಹಮ್ಮದ್‌ಸಾದಕ್, ಎಂಬ ಈ ಐದು ಜನಗಳನ್ನು ಬಳಿಗೆ ಕರೆದು,—* ದೊರೆಗಳವರಾದ ಇಮ್ಮಡಿ ಕೃಷ್ಣರಾಜ ಒಡೆಯರವರು, ಸ್ವಲ್ಪ ಚಾಕರಿಯಲ್ಲಿದ್ದ ನನಗೆ ಸರ್ವಾಧಿಕಾರವನ್ನು ಕೊಟ್ಟುದರಿಂದ, ನಾನು † ನಮ್ಕ್‌ಹರಾಮ'ನೆನಿಸಿಕೊಳ್ಳದೆ ಇದುವರೆಗೂ ಸ್ವಾಮಿ ಭಕ್ತಿಯಿಂದಲೇ ಚಾಕರಿಮಾಡಿಕೊಂಡು ಇರುತ್ತಿದ್ದೆನು.

---

* ಶ್ರೀಮನ್ಮಹಾರಾಜರವರ ವಂಶಾವಳಿ, ಪುಟ. ೨೩೨

† ಕೃತಘ್ನ

ಮುಂದೆ ನನ್ನ ಮಗ ಟೀಪೂಸುಲ್ತಾನನೂ ಇದೇ ಮೇರೆಗೆ ನಡೆದುಕೊಂಡರೆ, ಈ ಅಧಿಕಾರವು ಅವನಿಗೆ ಇರುವುದು. ದುಷ್ಟಜನಗಳ ಮಾತುಗಳಿಂದಲೂ, ಅವನ ಹಟ್ಟನಡತೆಯಿಂದಲೂ, ಏನಾದರೂ ಹೆಚ್ಚು ಕಡಿಮೆಯಾಗಿ ನಡೆದರೆ ಅವನು ಕೆಟ್ಟುಹೋಗುವನು. ನೀವುಗಳು ಕಲ್ಲಿಕೋಟೆಗೆ ಹೋಗಿರುವ ನನ್ನ ಮಗನಾದ ಟೀಪೂಸುಲ್ತಾನನನ್ನು ಶೀಘ್ರವಾಗಿ ಕರೆಸಿ, ಈ ವಿವರವನ್ನು ಭಯಪಡದೆ ಅವನಿಗೆ ಹೇಳಿ ಈ ಅಧಿಕಾರದಲ್ಲಿ ಅವನನ್ನು ಕುಳ್ಳಿರಿಸಿ, ಜೀವನವನ್ನು ಮಾಡಿಕೊಂಡು ಹೋಗುವಂತಾಗಿ" ಎಂದು ರಹಸ್ಯವಾಗಿ ಹೇಳಿ, ಮುಂದೆ ಬಹು ನಿಸ್ತ್ರಾಣವಾಗಲು ೧೭೮೨ನೆಯ ಇಸವಿಗೆ ಸರಿಯಾದ ಶಾ. ಶ. ೧೭೦೪ನೆಯ ಶುಭಕೃತು ಸಂವತ್ಸರದ ಮಾರ್ಗಶಿರ ಶುದ್ಧ ೩ ಶನಿವಾರ ಮಧ್ಯಾಹ್ನ ಆರ್ಕಾಟು ದಂಡಿನಲ್ಲಿ ತೀರಿಹೋದನು.



ಅಧ್ಯಾಯ ೫ "ಮುಮ್ಮಡಿ ಕೃಷ್ಣರಾಜ ಒಡೆಯರು"

ತನ್ನ ತಂದೆಯಾದ ನವಾಬ್ ಹೈದರಾಲಿಯ ಮರಣ ವಾರ್ತೆಯನ್ನು ಕೇಳಿದೊಡನೆಯೇ ಟೀಪೂಸುಲ್ತಾನನು, ಲೇಶಮಾತ್ರವೂ ಸಾವಕಾಶಮಾಡದೆ ಹೊರಟು ಶ್ರೀರಂಗಪಟ್ಟಣಕ್ಕೆ ಬಂದು, ದೊರೆಗಳವರನ್ನು ಕಂಡು, ಕೋಲಾರಕ್ಕೆ ಕಳುಹಿಸಿದ್ದ ತಮ್ಮ ತಂದೆಯ ಶರೀರವನ್ನು ಪುನಃ ಶ್ರೀರಂಗಪಟ್ಟಣಕ್ಕೆ ತರಿಸಿಕೊಂಡು, ತಮ್ಮ ಜಾತಿ ಸಂಪ್ರದಾಯದಮೇರೆಗೆ ಗೋರಿಯನ್ನು ಮಾಡಿಸಿ, ಫಕೀರರುಗಳಿಗೂ ಬಡಬಗ್ಗರಿಗೂ ಅನ್ನ ವಸ್ತ್ರಾದಿಗಳನ್ನಿತ್ತು,-ಹೀಗೆ ತನ್ನ ಮತಪದ್ಧತಿಯ ಪ್ರಕಾರ ಮೃತನಿಗೆ ಆತ್ಮ ಶಾಂತಿಯ ಕೃತ್ಯಗಳನ್ನು ನೆರವೇರಿಸಿ ತರುವಾಯ ರಾಜಕಾರ್ಯಗಳನ್ನು ಕುರಿತು ಗಮನಿಸತೊಡಗಿದನು. ಪ್ರಾರಂಭದ ಕೆಲಕಾಲ ಟೀಪುವು ವಿಹಿತವಾಗಿ ರಾಜಕಾರ್ಯಗಳನ್ನು ನಡೆಯಿಸುತ್ತಿದ್ದಂತೆಯೇ ಕಂಡುಬರುತ್ತದೆ. ಈ ಕಾಲದಲ್ಲೇ ಖಾಸಾ ಚಾಮರಾಜ ಒಡೆಯರವರ ಸ್ವೀಕೃತ ಜನನಿಯವರಾದ ಲಕ್ಷ್ಮಮ್ಮಣ್ಣಿಯವರ ಅಪ್ಪಣೆಯ ಮೇರೆಗೆ ದೊರೆಗಳಿಗೆ ಎರಡು ವಿವಾಹಗ

ಳನ್ನು ಮಾಡಿಸಿದರು. ಎರಡನೆಯ ಪತ್ನಿಯವರಾದ ಕೆಂಪದೇವಾಜಮ್ಮಣ್ಣಿಯವರು, ಮುಂದೆ ಕಾಲಕ್ರಮದಲ್ಲಿ ಪುತ್ರನನ್ನು ಪಡೆದು, ಶಿಶುವಿನೊಂದಿಗೆ ತೀರಿಹೋಗಲು, ದೊರೆಗಳು ಪರಿಜನ ಪುರಜನರ ಮತ್ತು ಆಪ್ತ ಅಧಿಕಾರಿಗಳ ಸಲಹೆಯನ್ನು ಅನುಸರಿಸಿ ಪಂಚ ಕಲ್ಯಾಣವನ್ನು ಮಾಡಿಕೊಂಡು ಸುಖವಾಗಿದ್ದರು.

ಹೀಗೆ ಕೆಲವು ದಿನಗಳ ರಾಜ್ಯಾಪತ್ಯವು ನಡೆದಮೇಲೆ, ಟೀಪೂಸುಲ್ತಾನನ ಗುಣ ನಡತೆಗಳು ಬದಲಾಯಿಸಿದುವು. ಆ ಕಾಲದಲ್ಲಿ ಆತನ ನಡತೆಯು ಹೇಗಿತ್ತೆಂಬುದನ್ನು ಶ್ರೀಮನ್ಮಹಾರಾಜರವರ ವಂಶಾವಳಿ ಎಂಬ ಗಂಥವು ಹೀಗೆ ವರ್ಣಿಸುತ್ತದೆ. (ಪುಟ ೨[illegible])—"ಕೆಲವು ದಿವಸದಮೇಲೆ (ಟಿಪ್ಪುವು) ತನ್ನ ತಂದೆ ಹೇಳಿದ್ದ ಕೀರ್ತಿಯನ್ನುಂಟುಮಾಡತಕ್ಕ ಮಾತುಗಳನ್ನೆಲ್ಲ ಮರೆತು, ತಾನು ಮುಂದೆ ಕೆಟ್ಟುಹೋಗತಕ್ಕ ಬಗೆಯನ್ನು ತಿಳಿದುಕೊಳ್ಳದೆ, ಯುಕ್ತಾಯುಕ್ತ ವಿಚಾರವನ್ನು ಮಾಡದೆ, ಬಲೈಶ್ವರ್ಯಗಳಿಂದ ಮತ್ತನಾಗಿ, ದುರ್ಜನರ ದುರಾಲೋಚನೆಗೆ ಒಳಗಾಗಿ, ಸಜ್ಜನರನ್ನು ಬಾಧೆಪಡಿಸಿ, ವರ್ಣಾಶ್ರಮ ಧರ್ಮಗಳನ್ನು ಕೆಡಿಸುತ್ತ, ಉತ್ತಮರಾದ ಸಕಲ ಜಾತಿ ಜನರುಗಳನ್ನೂ, ತನ್ನ ಜಾತಿಗೆ ಸೇರಿಸಿಕೊಳ್ಳಬೇಕೆಂದು, ಕೆಲವು ಜನಗಳನ್ನು ಚೇಲಿಯವರನ್ನಾಗಿ ಮಾಡಿಕೊಂಡು, ದೇವಾದಾಯ, ಬ್ರಹ್ಮದಾಯ, ಸೀಮೆಗಳಲ್ಲಿರುವ ದೇವರುಗಳ ವಸ್ತ್ರಾಭರಣಗಳನ್ನು ತೆಗೆದುಕೊಂಡು, ಗುಡಿ ಗೋಪುರ ತಟಾಕಾರಾಮ ಕಟ್ಟೆ ಕಾಲುವೆ ಸೇತುವೆ ಸೋಪಾನ ಮುಂತಾದ ಅನೇಕ ದರ್ಮಕಾರ್ಯಗಳನ್ನು ನಾಶಮಾಡಿದನು. ದುಷ್ಟರಾದ ತನ್ನ ಜಾತಿಯ ಜನರಿಗೇ ಪ್ರಾಬಲ್ಯವನ್ನು ಕೊಟ್ಟು, ಅರಸುಗಳು ಮುಂತಾದ ಉತ್ತಮ ವರ್ಣಾಶ್ರಮ ಜನರುಗಳ ಗ್ರಾಮ ಭೂಮಿ ಸಂಬಳ ಮೊದಲಾದ ಜೀವನಗಳನ್ನು ತಪ್ಪಿಸಿ ದೇಶಭ್ರಷ್ಟರನ್ನಾಗಿ ಮಾಡಿದನು. ತನ್ನಲ್ಲಿ ಅಧಿಕಾರ ಮಾಡುತ್ತಿರುವ ಜನರುಗಳ ಅಪರಾಧಾನುಗುಣವಾಗಿ ಶಿಕ್ಷೆಯನ್ನು ಮಾಡಿಸದೆ, ಅಧಿಕವಾಗಿ ಅವರುಗಳಿಗೆ ಅಂಗಭಂಗಗಳನ್ನೂ ಪ್ರಾಣಾಂತ ಶಿಕ್ಷೆಗಳನ್ನೂ ಮಾಡಿಸುತ್ತಿದ್ದನು. ಹೀಗೆ ದುಷ್ಟ ಜನಗಳನ್ನು ಪ್ರಾಬಲ್ಯಕ್ಕೆ ತಂದು, ಸಜ್ಜನರಿಗೆ ಅನೇಕ ಬಾಧೆಗಳನ್ನುಂಟುಮಾಡಿ. ದೊರೆಗಳವರ ಸಿಂಹಾಸನದಂತೆ ಅನೇಕ ನವರತ್ನಗಳಿಂದ ವ್ಯಾಘ್ರಪೀಠವನ್ನು ಮಾಡಿಸಿ, ಅದರಮೇಲೆ ಕುಳಿ

ತುಕೊಂಡು, ತಾನೇ ಬಾದಶಾಹನೆನಿಸಿಕೊಳ್ಳಬೇಕೆಂಬ ಕುತೂಹಲದಿಂದ ಇರುತ್ತಿದ್ದನು."

ಖಾಸಾ ಚಾಮರಾಜ ಒಡೆಯರು, ಈತನ ದುಶ್ಚರಿತ್ರೆಯನ್ನೂ ಪ್ರಜಾಕ್ಷೋಭೆಯನ್ನೂ ಕೇಳಿ, ಮಹಾವ್ಯಸನಾಕ್ರಾಂತರಾಗಿ, ತಮ್ಮ ರಾಜ್ಯಕ್ಕೆ ದಿಕ್ಕಾಗಿರುವಂತಹ ದೀರ್ಘಾಯುರ್ಯೋಗವುಳ್ಳ ಪುತ್ರರತ್ನವನ್ನು ಕರುಣಿಸಬೇಕೆಂದು ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿಯನ್ನು ಆರಾಧಿಸಿ ಕೋಟಿ ಪಂಚಾಕ್ಷರೀ ಜಪ ಹೋಮ ತರ್ಪಣಾದಿ ಕಾರ್ಯಗಳನ್ನು ನಡೆಸಿದರು. ಈ ಕಾರ್ಯಗಳಲ್ಲೆಲ್ಲಾ ನಮ್ಮ ಕಥಾನಾಯಿಕೆಯವರು ಸೂತ್ರಧಾರಿಗಳಂತಿದ್ದು, ಸರ್ವಕಾರ್ಯಗಳಲ್ಲೂ ದೊರೆಗಳವರಿಗೆ ಮಾರ್ಗದರ್ಶಕರಾಗಿದ್ದು ಗೃಹಕೃತ್ಯದ ಸಕಲ ಕಾರ್ಯಗಳನ್ನೂ ನಿರ್ವಹಿಸುತ್ತಿದ್ದರು. ಮುಂದೆ ಯುಕ್ತಕಾಲದಲ್ಲಿ ರಾಜಪತ್ನಿ ಕೆಂಪನಂಜಮ್ಮಣ್ಣಿಯವರು ಗರ್ಭಧಾರಣೆ ಮಾಡಿ ನವಮಾಸ ಕಳೆಯಲು ಪುರುಷ ಶಿಶುವನ್ನು ಪ್ರಸವಿಸಿದರು. ಈ ಶಿಶುವಿಗೆ ನಂಜರಾಜ ಒಡೆಯರೆಂದು ನಾಮಕರಣ ಮಾಡಿದರು. ಇವರೇ ಮುಂದೆ ಮುಮ್ಮಡಿ ಕೃಷ್ಣರಾಜ ಒಡೆಯರೆಂದು ಪ್ರಸಿದ್ಧರಾದವರು.

ಸರ್ವಾಧಿಕಾರಿ ಟೀಪೂಸುಲ್ತಾನನ ಪ್ರಾಬಲ್ಯವು ದಿನದಿನಕ್ಕೆ ಹೆಚ್ಚುತ್ತಾ ಹೋಯಿತು. ಮೇಲೆಹೇಳಿದಂತೆ, ಆತನು ವ್ಯಾಘ್ರಾಸನವನ್ನು ಮಾಡಿಸಿಕೊಂಡು ತಾನೇ ನವಾಬನೆಂದು ಹೇಳಿಸಿಕೊಳ್ಳಬೇಕೆಂಬ ಹವಣಿಕೆಯಲ್ಲಿದ್ದನು. ಆತನ ಈ ಆಶಯಕ್ಕೆ ಪೂರ್ವೀಯ ರಾಜವಂಶವು ವಿಘ್ನಕಾರಿಯಾಗಿದ್ದಿತೆಂದು ಪ್ರತ್ಯೇಕ ಹೇಳಬೇಕಾದುದಿಲ್ಲವಷ್ಟೆ! ಅದನ್ನು ಎಷ್ಟು ಶೀಘ್ರವಾಗಿ ನಿರ್ನಾಮಗೊಳಿಸಿದರೆ, ತನ್ನ ಮನೋಭೀಷ್ಟವು ಅಷ್ಟು ಶೀಘ್ರವಾಗಿ ನೆರವೇರಲಿರುವುದೆಂಬುದು ಅವನಿಗೆ ಸ್ಪಷ್ಟವಾಯಿತು. ಈ ಮಧ್ಯೆ ಖಾಸಾ ಚಾಮರಾಜ ಒಡೆಯರಿಗೆ ಪುತ್ರಸಂತಾನ ಪ್ರಾಪ್ತಿಯಾದುದು ಅವನಿಗೆ ಶಿರೋವೇದನೆಯನ್ನುಂಟುಮಾಡಿತೆಂಬುದಕ್ಕೆ ಸಂದೇಹವಿಲ್ಲ. ರಾಜವಂಶವು ಪ್ರಬಲಿಸಿದಷ್ಟೂ, ತನ್ನ ಅಧಿಕಾರದ ಸ್ಥಿರತ್ವಕ್ಕೆ ಭಂಗವುಂಟಾಗವದೆಂಬುದು ಅವನಿಗೆ ಸ್ಪಷ್ಟವಾಯಿತು. ಅವರನ್ನು ಎಷ್ಟು ಶೀಘ್ರವಾಗಿ ನಾಶಗೊಳಿಸಿದರೆ, ತಾನು ಏಕಾಧಿಪತ್ಯಮಾಡಲು ಮಧ್ಯದಲ್ಲಿನ ಕಂಟಕವು ತೊಲಗಿ, ಮಾರ್ಗವು ಅಷ್ಟು ಸುಗಮವಾಗುವುದೆಂದು ಯೋಚಿಸಿಕೊಂಡಿದ್ದನು.

ಅವನು ಹೀಗೆ ಯೋಚಿಸಿಕೊಂಡಿದ್ದ ಕಾಲದಲ್ಲೇ, ಇತ್ತ ರಾಜವಂಶದಲ್ಲೂ ಒಂದು ಅಗಾಧ ನಷ್ಟ ಸಂಭವಿಸಿತು. ಖಾಸಾ ಚಾಮರಾಜ ಒಡೆಯರು. ಕ್ರಿ. ಶ. ೧೭೭೬ನೆಯ ಸಂವತ್ಸರದಲ್ಲಿ ಸ್ವರ್ಗಸ್ಥರಾದರು. ಇದು ಅವನ ಕಾರ್ಯಕ್ಕೆ ಅತಿಶಯ ಅನುಕೂಲತೆಯನ್ನುಂಟುಮಾಡಿತೆಂದು ಹೇಳಬೇಕಾದುದೇನು! ಖಾಸಾ ಚಾಮರಾಜ ಒಡೆಯರ ಮರಣದಿಂದ, ಇನ್ನು ರಾಜವಂಶದಲ್ಲಿ ಮೂರು ನಾಲ್ಕು ಮಂದಿ ಸ್ತ್ರೀಯರೂ, ಎರಡು ವರ್ಷದ ಒಂದು ಮಗುವೂ ಮಾತ್ರ ಉಳಿದಂತಾಯಿತು. ದಕ್ಷರಾದ ಪುರುಷರು ರಾಜ್ಯಾಧಿಪತ್ಯ ಮಾಡುತ್ತಿದ್ದ ಕಾಲದಲ್ಲೇ-ಕುಟಿವಿಾರದ ಹಲ್ಲಿನಂತೆ-ಪ್ರಬಲಿಸಿ ಸರ್ವಾಧಿಕಾರ ಮಾಡಿ, ಅವರನ್ನು ನಾಮಮಾತ್ರ ರಾಜರೆನ್ನಿಸಿದ್ದ ಧೂರ್ತ ಟಿಪ್ಪೂ ಸುಲ್ತಾನನು ಈಗ ಅವರ ಮರಣದಿಂದ ಕೇವಲ ಅಸಾಥರಾದ ರಾಜವಂಶೀಕರನ್ನು ಹೇಗೆ ಕಾಣತೊಡಗಿದನು, ಹೇಗೆ ನೋಡಿಕೊಳ್ಳುತ್ತಿದ್ದನು, ಅವರ ಅನುಕೂಲತೆಗಳಿಗೆ ಹೇಗೆ ಸಹಾಯಕನಾಗಿದ್ದನು, ಎಂಬ ಸಂಗತಿಗಳನ್ನು ಹೇಳಬೇಕಾದುದೇನು! ಆ ಸಂದರ್ಭದಲ್ಲಿ ಮಹಾರಾಣಿ ಲಕ್ಷ್ಮಮ್ಮಣ್ಣಿಯವರು, ಮದರಾಸಿನಲ್ಲಿದ್ದ ತಮ್ಮ ಕಡೆಯ ವಕೀಲರಾದ ತಿರುಮಲರಾಯರಿಗೆ ಬರೆದಿದ್ದ ಒಂದು ಪತ್ರದಿಂದ, ಆಗ ರಾಜಕುಟುಂಬದವರು, ಎಂತಹ ದುರಂತ ಸಂಕಟಕ್ಕೆ ಒಳಪಟ್ಟಿದ್ದರೆಂಬುದು ಸ್ಪಷ್ಟವಾಗುತ್ತದೆ. ಆ ಪತ್ರವನ್ನು 'ಅಬಲಾಸಚ್ಚರಿತ್ರ ರತ್ನಮಾಲಾ' ಎಂಬ ಆಂಧ್ರ ಗ್ರಂಥದಿಂದ ತರ್ಜುಮೆಗೊಳಿಸಿ. ಇಲ್ಲಿ ಯಥಾವತ್ತಾಗಿ ಕೊಡಲೆಳಿಸುತ್ತೇವೆ.

“ನಾವು ನಮ್ಮ ದೀನಾವಸ್ಥೆಯನ್ನು ಕುರಿತು, ಈವರೆಗೆ ಹಲವುವೇಳೆ ನಿಮಗೆ ತಿಳಿಸಿದ್ದೇವೆ. ನೀವು ಮೈಸೂರನ್ನು ಬಿಟ್ಟು ನಡೆದು ಈಗ್ಗೆ ಇಪ್ಪತ್ತೆರಡು ವರ್ಷಗಳಾಗುತ್ತಿವೆ. ನಾವು ಪ್ರತಿದಿನವೂ, ಈ ಯವನ ರಾಕ್ಷಸನು ಕೊಡುತ್ತಿರುವ ಅನೇಕ ವಿಧವಾದ ಬಾಧೆಗಳನ್ನು ಅನುಭವಿಸುತ್ತಲೇ ಇದ್ದೇವೆ. ಅವನು. ಸ್ಫೋಟಕ ರೋಗದ ಕಾರಣವನ್ನು ಕಲ್ಪಿಸಿ, ಚಾಮರಾಜ ಒಡೆಯರನ್ನು ಗುಪ್ತವಾಗಿ ಕೊಲ್ಲಿಸಿದನು. ನಮಗೆ ಶರೀರಾಚ್ಛಾದನೆಗೆ ಒಂದು ವಸ್ತ್ರವೂ ದೊರಕದಂತೆ ಮಾಡಿಟ್ಟು ಅಗಾಧ ಬಾಧೆಪಡಿಸುತ್ತಿದ್ದಾನೆ. ನಮ್ಮನ್ನು ರಾಜಮಂದಿರದಲ್ಲಿ ಇರಗೊಡಿಸದೆ ಅಲ್ಲಿಂದ ಹೊರಕ್ಕೆ ಹೊರಡಿಸಿದನು. ನಾವು ಅಲ್ಲಿಂದ ಹೊರಟು ಬರುವಾಗ ಅರಮನೆಯ

ಕಾವಲಿನವರು ನಮ್ಮಲ್ಲಿ ಬೆಲೆಯುಳ್ಳ ಪದಾರ್ಥಗಳಿವೆಯೋ ಎಂಬ ಬಗ್ಗೆ
ನಮ್ಮನ್ನು ಪರೀಕ್ಷಿಸಿ ಹೊರಕ್ಕೆ ಬಿಡುವಂತೆ ಆಜ್ಞಾಪಿಸಿ, ಹೀಗೆ ಅಗಾಧ
ಅಪಮಾನಕ್ಕೆ ಗುರಿಮಾಡಿದನು. ಮಾತ್ರವಲ್ಲ-ಅವರು ನಮ್ಮ ಮೈಮೇಲಿನ
ನಗಗಳನ್ನೆಲ್ಲ ಸುಲಿದುಕೊಂಡು, ಉಟ್ಟುಕೊಳ್ಳುವದಕ್ಕೆ ಒಂದು ಮೈಲಿಗೆಯ
ವಸ್ತ್ರವನ್ನು ಕೊಟ್ಟರು. ನಮಗೆ ವಾಸಕ್ಕೆ ಕಾಂತಿರಾವು ಇವರ ಹಳೆಯ
ಮನೆಯಲ್ಲಿ ಒಂದೆಡೆ ಸ್ವಲ್ಪ ಸ್ಥಳಕೊಟ್ಟಿದ್ದಾರೆ. ನಮ್ಮ ಸುತ್ತಲೂ ಮುಸ
ಲ್ಮಾನ ಸಿಪಾಯಿಗಳ ಪಹರೆಯಿದೆ. ನಮ್ಮ ದಾಸಿಯರಾಗಿದ್ದ ಅಪ್ಪೇರುಗಳ
ನ್ನೆಲ್ಲ ಮುಸಲ್ಮಾನೀಯ ಮತಸ್ಥರನ್ನಾಗಿ ಮಾಡಿಸಿ, ಅವರನ್ನು ಅತಿ ನಿಕೃಷ್ಟ
ವಾದ ಕಾರ್ಯಗಳಿಗೆ ನಿಯಮಿಸುತ್ತಿದ್ದಾನೆ. ಮತ್ತೆ ಕೆಲವರನ್ನು ಅತಿ
ದೂಷ್ಯವಾದ ವೇಶ್ಯಾವೃತ್ತಿಯನ್ನು ಅವಲಂಬಿಸುವಂತೆ ನಿರ್ಬಂಧಗೊಳಿಸಿ
ದ್ದಾನೆ. ಮಿಕ್ಕ ಕೆಲವರಿಂದ ಶೌಕಚಾಪಗಳನ್ನು ತೊಳೆಸುತ್ತಿದ್ದಾನೆ.
ಪ್ರತಿದಿನವೂ ನಮಗೆ ಭಿಕ್ಷದವರಿಗೆ ಕೊಟ್ಟಂತೆ ಭತ್ತೆಯು ಕೊಡ
ಲ್ಪಡುತ್ತಿದೆ. ನಮಗೆ ಅಡಿಗೆಗೆ ಹಿತ್ತಾಳೆ ತಾಮ್ರದ ಪಾತ್ರೆಗಳಿಗೆ ಕೂಡ
ಲಭ್ಯವಿಲ್ಲ-ನಾವು ಗಡಿಗೆಗಳಲ್ಲಿ ಅಡಿಗೆಮಾಡಿಕೊಂಡು, ಎಲೆಗಳಲ್ಲಿ ಊಟಮಾ
ಡುತ್ತಿದ್ದೇವೆ ಟಿಪ್ಪೂವು ಶೀಘ್ರದಲ್ಲೇ ನಮ್ಮ ಪ್ರಾಣಹರಣಮಾಡುತ್ತೇ
ನೆಂದು ಪ್ರತಿಜ್ಞೆ ಮಾಡಿದ್ದಾನಂತೆ! ನಮ್ಮ ಪ್ರಾಣಗಳನ್ನು ಎಂದು ಆಹು
ತಿಗೊಳ್ಳುವನೋ ತಿಳಿಯದು. ಹೀಗೆ ಅದೃಷ್ಟಹೀನರಾದ ನಮಗೆ ಸಹಾ
ಯಮಾಡಲು ಪ್ರಯತ್ನಿಸಿ, ನೀವು ಅಗಾಧ ಕಷ್ಟಗಳಿಗೆ ಒಳಪಟ್ಟಿರಿ. ನಮ
ಗೋಸ್ಕರವಾಗಿ ಇಂಗ್ಲೀಷಿನವರೊಂದಿಗೆ ಸ್ನೇಹವನ್ನು ಸಂಪಾದಿಸಲಿಚ್ಛಿಸಿ.
ಜಾರ್ಜ್ ಸಲ್ಲಿವನ್ ದೊರೆಯೊಂದಿಗೂ, ಇತರ ಸರದಾರರೊಂದಿಗೂ ಸಂಭಾ
ಷಣೆ ನಡೆಸಿ, ಅವರು ನಮಗೆ ಸಹಾಯಕರಾಗುವಂತೆ ಪ್ರಯತ್ನಮಾಡಿದಿರಿ.
ಇಷ್ಟುಮಾತ್ರವಲ್ಲ, ನಮಗಾಗಿ ನಿಮ್ಮ ಮಿತ್ರರನ್ನೂ ಬಾಂಧವರನ್ನೂ ಈ
ಯವನ ರಾಕ್ಷಸನಿಗೆ ಆಹುತಿಯಾಗಿ ಅರ್ಪಿಸಿದಿರಿ. ಹೀಗೆ ನಿಮಗೆ ಪ್ರಾಪ್ತ
ವಾದ ಸಂಕಟ ಪರಂಪರೆಗಳನ್ನು ಯೋಚಿಸಿಕೊಂಡರೇ ನನ್ನ ಎದೆ ಬಿರಿದು
ಹೋಗುತ್ತದೆ. ಇಷ್ಟುಬಗೆಯ ಕಷ್ಟನಷ್ಟಗಳು ಪ್ರಾಪ್ತವಾದರೂ ಇನ್ನೂ
ನಮ್ಮ ಪ್ರಯತ್ನವು ಸಫಲವಾಗಿ ನಮ್ಮ ರಾಜ್ಯಕ್ಕೆ ಸ್ವಾತಂತ್ರ್ಯವು ಲಭಿಸದಿ
ರುವುದು ಅಧಿಕ ಸಂತಾಪಕರವಾಗಿದೆ ಇನ್ನು ಕೆಲವು ದಿನಗಳಲ್ಲೇ ನಾವು

ನಾಶವಾಗುವೆವೆಂಬುದಕ್ಕೆ ಸಂದೇಹವುಳಿದಿಲ್ಲ. ಟಿಪ್ಪುವಿನ ಬಳಿ ಈಗೊಬ್ಬ ಫ್ರೆಂಚ್ ವಕೀಲನು ಬಂದಿದ್ದಾನೆ. ಅವನು, ನಮ್ಮನ್ನು (ರಾಣೀ ಲಕ್ಷ್ಮಮ್ಮಣ್ಣಿಯವರನ್ನು) ಕೊಲ್ಲದಿದ್ದರೆ, ಸದ್ಯದಲ್ಲೇ ಟಿಪ್ಪುವಿಗೆ ನಾಶ ಸಂಭವಿಸುವುದೆಂದು ಅವನಿಗೆ ಉಪದೇಶಮಾಡಿದ್ದಾನಂತೆ. ಅದರಮೇಲೆ ನಮ್ಮನ್ನು ಶೀಘ್ರವಾಗಿಯೇ ಕೊಲ್ಲಬೇಕೆಂದು ನಿಶ್ಚಯಿಸಿದ್ದಾರೆಯಂತೆ! ಟಿಪ್ಪುವಿಗೂ ಫ್ರೆಂಚರಿಗೂ ನಡೆದ ಸಂಧಿ ಕರಾರಿನ ನಕಲೊಂದನ್ನು ಇದರೊಂದಿಗೆ ಕಳುಹಿಸಿದ್ದೇನೆ. ನೀವು ಇದನ್ನು ತಪ್ಪದೆ, ಇಂಗ್ಲಿಷ್ ಗೌರ್ನರ್‌ರವರಿಗೆ ತೋರಿಸಬೇಕು. ಫ್ರೆಂಚರು ಇಲ್ಲಿಗೆ ಬಂದು ಠಾಣ್ಯ ಹಾಕುವುದಕ್ಕೆ ಮುಂಚಿತವಾಗಿಯೇ ಇಂಗ್ಲೀಷರು ತಮ್ಮ ಸೈನ್ಯವನ್ನು ಕಳುಹಿಸಿ ಈ ಯವನ ರಾಕ್ಷಸನ ಗರ್ವವನ್ನು ಅಡಗಿಸದಿದ್ದರೆ, ಮುಂದೆ ಕಂಪೆನಿಯವರ ರಾಜ್ಯಕ್ಕೇ ಅಗಾಧ ಭಯವು ಪ್ರಾಪ್ತವಾಗಬಹುದು. ಆಗ ಎಲ್ಲರ ಪ್ರಾಣಕ್ಕೂ ಅಪಾಯವುಂಟಾಗದಿರದು. ಈವರೆಗೆ ಎರಡು ಮೂರು ಸಾರಿ ಮಾಡಿದಂತೆ, ಈ ಬಾರಿಯೂ ಇಂಗ್ಲೀಷರು ವಿಳಂಬಮಾಡುವರಾದರೆ, ಫ್ರೆಂಚರು ಟಿಪ್ಪುವಿನೊಂದಿಗೆ ಕಲೆತು ಭಯಂಕರವಾದ ಅಗ್ನಿಯು ಪ್ರಚಂಡ ಮಾರುತನೊಂದಿಗೆ ಸೇರಿದಂತೆ ಸಕಲ ದೇಶಗಳನ್ನೂ ಹಾಳುಮಾಡಿ ಪ್ರಜಾಸಂಹಾರಮಾಡಲು ಹಿಂಜರಿಯರು. ಇಂಗ್ಲೀಷರಿಗೆ ನಮ್ಮ ವಿಜ್ಞಾಪನೆಯನ್ನು ಕುರಿತೂ, ನಮ್ಮ ಪ್ರಾಣರಕ್ಷಣೆಯನ್ನು ಕುರಿತೂ ಲಕ್ಷ್ಯವುಂಟಾಗದಿದ್ದರೆ ಹೋಗಲಿ, ಅವರ ರಾಜ್ಯದ ಸುರಕ್ಷಣೆಗಾಗಿಯಾದರೂ ಅತಿ ತ್ವರಿತವಾಗಿ ಸೈನ್ಯಗಳನ್ನು ಕಳುಹಿಸಬೇಕೆಂದು ನೀವು ಅವರೊಂದಿಗೆ ಖಂಡಿತವಾಗಿ ಹೇಳಿರಿ. ಆವರೆಗೆ ಹೇಗಾದರೂ ಮಾಡಿ ನಾವು ಪ್ರಾಣಗಳನ್ನು ಹಿಡಿದುಕೊಂಡಿರುವೆವು.

"ರಾಜ್ಯವು ನಮಗೆ ದೊರಕಿದರೆ, ಇಂಗ್ಲೀಷರಿಗೆ ಒಂದುಕೋಟಿರೂಪಾಯಿಗಳನ್ನು ಕೊಡಲೊಪ್ಪುತ್ತೇವೆ. ನೀವು ಸಲ್ಲಿವನ್ ದೊರೆಯೊಂದಿಗಾದರೂ ಕರಾರು ನಾಮೆಯನ್ನು ಮಾಡಿಕೊಳ್ಳಿರಿ. ಸಲ್ಲಿವನ್ ಮೊದಲಾದ ಸರದಾರರಿಗೆಲ್ಲರಿಗೂ, ವಾಸಯೋಗ್ಯವಾಗಿ ಅಗ್ರಹಾರಗಳನ್ನು ಕೊಡುತ್ತೇವೆ. ಈ ಯವನ ರಾಜನು ಮಹಾಕ್ರೂರನಾಗಿರುವುದರಿಂದ ಪ್ರಜೆಗಳಿಗೆ ಅಧಿಕ ಬಾಧೆಯುಂಟಾಗುತ್ತಿದೆ. ಆದ್ದರಿಂದ ಸೇನೆಗಳಲ್ಲಿರುವ ಸೈನಿಕರೆಲ್ಲರೂ ಅವನಿಗೆ ವಿರೋಧಿಗಳಾಗಿಯೇ ಇದ್ದಾರೆ. ಇಂತಹ ಸಂದರ್ಭದಲ್ಲಿ

ಇಂಗ್ಲೀಷು ಸೈನ್ಯಕ್ಕೆ ಇಲ್ಲಿನ ಸೈನ್ಯದಿಂದ ಅಧಿಕ ಸಹಾಯ ದೊರೆಯಬಹುದು. ಇಲ್ಲಿರುವವರೆಲ್ಲರೂ ಅವನ ನಾಶವನ್ನೇ ಕೋರುತ್ತಿದ್ದಾರೆ. ಇಂಗ್ಲೀಷು ಸೈನ್ಯವು ಯಾವಮಾರ್ಗದಿಂದ ಬಂದರೂ ಅವರಿಗೆ ಭೋಜನಾದಿ ಸಾಮಾಗ್ರಿಗಳಿಗೆ ಯಾವ ಅಟಂಕವೂ ಇಲ್ಲದೆ, ಅನುಕೂಲದೊರಕುವುದು. ಆದುದರಿಂದ ನೀವು ನಿಮ್ಮ ಸಾಮರ್ಥ್ಯವನ್ನೆಲ್ಲ ವಿಚಾರಮಾಡಿ ಯುದ್ಧ ಪ್ರಯತ್ನ ಮಾಡುವಿರಾದರೆ, ಶ್ರೀರಂಗನಾಥನು ತಪ್ಪದೆ ನಿಮಗೆ ಸಹಾಯಮಾಡುವ ನೆಂದು ನಂಬುತ್ತೇವೆ."

ಆ ಕಾಲದಲ್ಲಿ ಮೈಸೂರು ರಾಜವಂಶದವರ ಸ್ಥಿತಿಯೂ, ರಾಜ್ಯದ ಸ್ಥಿತಿಯೂ ಹೇಗಿದ್ದುವೆಂಬುದು ಈ ಪತ್ರದಿಂದ ಸ್ಪಷ್ಟವಾಗಿ ತಿಳಿಯ ಬರುತ್ತಿವೆಯಲ್ಲವೆ! ಅಂತಹ ಭಯಂಕರ ಸಮಯದಲ್ಲಿ ಯವನ ವೀರನಾದ ಟಿಪ್ಪುವಿಗೆ ವಿರುದ್ಧವಾಗಿ ಪ್ರಯತ್ನ ನಡೆಸುವುದೆಂದರೆ ಅದೆಷ್ಟು ಪ್ರಾಣಾಪಾಯಕರವಾದುದೆಂಬುದನ್ನು, ವಾಚಕ ಮಹಾಶಯರು ಯೋಚಿಸಬಹುದು. ಆದರೂ, ಅಂತಹ ಮಹಾಸಂಕಟ ಸಮಯದಲ್ಲೂ ಎದೆಗೆಡದೆ. ನಿಸ್ತರಂಗ ಸಮುದ್ರದಂತೆ ಮನಶ್ಶಾಂತಿಯನ್ನು ಕಾಪಾಡಿಕೊಂಡು, ಅಚಲ ಪರ್ವತದಂತೆ ಧೈರ್ಯವನ್ನು ಅವಲಂಬಿಸಿ, ಕಾರ್ಯಪ್ರಯತ್ನ ನಡೆಸಿಯೇ ಇದ್ದರೆಂಬುದನ್ನು ತಿಳಿದು ಎಂತಹ ಧೀರರೂ, ಆಶ್ಚರ್ಯಪಡಬೇಕಾಗಿದೆ. ಅಸಮಾನ ಸ್ತ್ರೀ ಧೈರ್ಯದ ಪ್ರತ್ಯಕ್ಷ ಉದಾಹರಣೆಯಾದ ಈ ಮಹಾರಾಣಿಯವರ ಈ ಕಾರ್ಯವು ಚರಿತ್ರಕಾರರಿಂದ ಸುವರ್ಣಾಕ್ಷರಗಳಲ್ಲಿ ವರ್ಣಿಸಿ ಬರೆದಿಡಲ್ಪಡಲು ಅರ್ಹವಾಗಿದೆ

ಮಹಾರಾಣಿಯವರು ಬರೆಸಿ ಕಳುಹಿಸಿದ್ದ ಪತ್ರದ ಸಂಗತಿಯು, ಇಂಗ್ಲೀಷ್ ಗವರ್ನರಿಗೆ ಮನವರಿಕೆ ಮಾಡಲ್ಪಟ್ಟಿತು. ದಿನದಿನಕ್ಕೆ ಹೆಚ್ಚಿ ಹೋಗುತ್ತಿದ್ದ ಟಿಪ್ಪುವನ್ನು ಇನ್ನೂ ಉದಾಸೀನಭಾವದಿಂದ ಬಿಟ್ಟಿರುವುದು ತಮಗೇ ಅಪಾಯ ಹೇತುವೆಂಬುದು ಅವರಿಗೂ ಗೋಚರವಾಯಿತು. ಆದುದರಿಂದ ಇನ್ನು ಅವನೊಂದಿಗೆ ಯುದ್ಧಮಾಡಬೇಕಾದುದೇ ಸರಿಯೆಂದು ಕಲ್ಕತ್ತೆಯಲ್ಲಿನ ಗವರ್ನರು ಜನರಲ್ ಸಾಹೇಬನು ನಿರ್ಧರಮಾಡಿದನು. ಒಡನೆ ಯುದ್ಧ ವಿದ್ಯಾ ವಿಶಾರದರಾದ ಜನರಲ್ ಹ್ಯಾರಿಸ್, ವೆಲ್ಲೆಸ್ಲಿ ಮುಂತಾದ ಸರದಾರರುಗಳನ್ನು ಸೈನ್ಯಸಮೇತ ಕಳುಹಿಸಿದನು. ಅವರು ಧೂಸ್ನಾ

ಪೇಷ್ವೆಯೊಂದಿಗೂ ಹೈದರಾಬಾದಿನ ನಿಜಾಮನೊಂದಿಗೂ ಯೋಗ್ಯಕರಾರುಗಳನ್ನು ಮಾಡಿಕೊಂಡು ೧೭೯೯ನೆಯ ಇಸವಿಯಲ್ಲಿ ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿ ಬಂದರು. ತರುವಾಯ ಶ್ರೀರಂಗಪಟ್ಟಣದಲ್ಲಿ ಮೈಸೂರು ಸೈನ್ಯಕ್ಕೂ ಇಂಗ್ಲೀಷು ಸೈನ್ಯಕ್ಕೂ ನಡೆದ ಘೋರಸಂಗ್ರಾಮವಿಚಾರವು ಐತಿಹಾಸಿಕ ಸುಪ್ರಸಿದ್ಧ ವಿಷಯವಾದುದರಿಂದ ಆ ಸಂಗತಿಯನ್ನು ಇಲ್ಲಿ ವರ್ಣಿಸಬೇಕಾದುದು ಅನಾವಶ್ಯಕವು. ಆ ಘೋರಯುದ್ಧದ ಪರಿಣಾಮವಾಗಿ ೧೭೯೯ನೆಯ ವರ್ಷದ ಮೇ ತಿಂಗಳು ೪ನೇ ತಾರೀಖಿನಲ್ಲಿ ಟಿಪ್ಪುಸುಲ್ತಾನನು ಹತನಾಗಲು ಮೈಸೂರು ರಾಜಸಿಂಹಾಸನವು ಬಾಧಮುಕ್ತವಾಯಿತು. ರಾಜವಂಶೀಕರೂ ಶತ್ರುಬಾಧೆಯಿಂದ ಬಿಡಲ್ಪಟ್ಟು ಸ್ವತಂತ್ರರಾದರು.

ಟಿಪ್ಪುಸುಲ್ತಾನನ ಮರಣದೊಂದಿಗೆ ಯುದ್ಧವು ಶಮನವಾಯಿತು. ಸ್ವಾಧೀನವಾದ ರಾಜ್ಯವನ್ನು ಇಂಗ್ಲೀಷರೂ ಮರಾಟೆಯವರೂ ನಿಜಾಮನೂ ಹಂಚಿಕೊಂಡರು. ಹೀಗೆ ವಿಭಾಗ ಮಾಡಿಕೊಳ್ಳುವಾಗ ಪೂರ್ವದ ರಾಜವಂಶದ ಪರವಾಗಿ ತಮಗೆ ಅಧಿಕಸಹಾಯ ಮಾಡಿದ ಮಹಾರಾಣಿ ಲಕ್ಷ್ಮಮ್ಮಣ್ಣಿಯವರನ್ನು ಮರೆಯದೆ ಅವರ ಆಲೋಚನೆಗೆ ಅನುಸಾರವಾಗಿ, ಈಗಿರುವಷ್ಟು ದೇಶವು ರಾಜವಂಶಕ್ಕೆ ಸಲ್ಲುವಂತೆ ಏರ್ಪಡಿಸಿ ವಿಂಗಡಿಸಿಟ್ಟರು. ಲಕ್ಷ್ಮಮ್ಮಣ್ಣಿಯವರೂ ಸಹ ವಯೋವೃದ್ಧರೂ ವಿಚಾರಜ್ಞರೂ ಆದ ಪೂರ್ಣಯ್ಯನೆಂಬ ಮಂತ್ರಿಪುಂಗವರ ಆಲೋಚನೆಯನ್ನು ಕೇಳಿಯೇ ಯಾವಕೆಲಸವನ್ನಾದರೂ ಮಾಡುತ್ತಾ ಕಂಪನಿಯವರ ಸಂಗಡ ಮಾಡಿಕೊಳ್ಳಬೇಕಾದ ಕೌಲು ಕರಾರುಗಳನ್ನೆಲ್ಲ ಮಾಡಿಕೊಂಡರು. ಇಕೆಯ ಆಲೋಚನೆಯನ್ನನುಸರಿಸಿಯೇ ಆಗ ಮೈಸೂರು ರಾಜವಂಶಕ್ಕೆ ಬಂದ ರಾಜ್ಯಭಾಗವನ್ನು ಐದುವಯಸ್ಸಿನ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಒಪ್ಪಿಸಿ ಪಟ್ಟಾಭಿಷೇಕಮಾಡಬೇಕೆಂದು ಜನರಲ್ ಹ್ಯಾರಿಸ್, ವೆಲ್ಲಿಸ್ಲಿ ಮೊದಲಾದ ಇಂಗ್ಲೀಷು ಸರದಾರರು ಒಪ್ಪಿ ಪಟ್ಟಾಭಿಷೇಕಕ್ಕೆ ಬೇಕಾದ ಅನುಕೂಲತೆಗಳನ್ನೆಲ್ಲ ಸಿದ್ಧಪಡಿಸುವಂತೆ ದಿವಾನ್ ಪೂರ್ಣಯ್ಯನವರಿಗೆ ಹೇಳಿದರು. ಪೂರ್ಣಯ್ಯನವರು ಆ ಸಂತೋಷ ವಾರ್ತೆಯನ್ನು ಒಡನೆ ಮಹಾರಾಣಿ ಲಕ್ಷ್ಮಮ್ಮಣ್ಣಿಯರಿಗೆ ತಿಳಿಸಿ ಅವರ ಆಜ್ಞಾನುಸಾರವಾಗ ಧೊರೆಗಳವರನ್ನು

ಶ್ರೀರಂಗ ಪಟ್ಟಣದಿಂದ ಮೈಸೂರು ನಜರುಬಾದು ಎಂಬ ಕೋಟೆಯ ಅರಮನೆಯಲ್ಲಿ ಇಳಿಸಿ ಪಟ್ಟಾಭಿಷೇಕಕ್ಕೋಸ್ಕರ ಆಗಬೇಕಾದ ಸರ್ವಸಾಮಗ್ರಿಗಳನ್ನೂ ಸಿದ್ಧಗೊಳಿಸಿದರು.

ವಿಧ್ಯುಕ್ತವಾಗಿ ನಡೆಯಬೇಕಾದ ಮಂಗಳಸ್ನಾನ ಹವನ ಹೋಮಾದಿ ಶುಭ ಕರ್ಮಗಳೆಲ್ಲವೂ ಕ್ರಮವಾಗಿ ನಡೆಯಲು ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಅಲಂಕಾರಮಾಡಿದ್ದ ಭದ್ರಪೀಠದಲ್ಲಿ ಮಹಾರಾಜರು ಮುಹೂರ್ತಮಾಡಿದರು. ಆಗ ನೆರದಿದ್ದ ಅಸಂಖ್ಯಾತ ಜನರೂ ಆರ್ಷೇಯವಾದ ರಾಜವಂಶವು ಹೀಗೆ ಪ್ರವರ್ಧಮಾನವಾಯಿತಲ್ಲಾ ಎಂಬ ಸಂತೋಷದಿಂದ ಆನಂದಬಾಷ್ಪಗಳನ್ನು ಸುರಿಸುತ್ತಾ ಕೈಚಪ್ಪಾಳೆಗಳಿಂದಲೂ ಕೋಲಾಹಲದಿಂದಲೂ ತಮ್ಮ ವಿಶೇಷ ಸಂತೋಷವನ್ನು ವ್ಯಕ್ತಪಡಿಸಿದರು. ಬ್ರಾಹ್ಮಣರು ಉಚ್ಚಸ್ವರದಿಂದ ಮಾಡುತ್ತಿದ್ದ ವೇದಘೋಷವೂ ಮಂಗಳವಾದ್ಯಗಳರವವೂ ಅಶೇಷ ಪ್ರಜೆಗಳೂ ಮಾಡುತ್ತಿದ್ದ ಜಯಜಯಕಾರವೂ ಕಿವಿಗಳನ್ನು ಕಿವುಡಾಗಿಸುತ್ತಿರಲು, ದಿವ್ಯಸುಮುಹೂರ್ತ ವೇಳೆಯು ಪ್ರಾಪ್ತವಾಯಿತು. ಆಗ ಒಂದು ಪಾರ್ಶ್ವದಲ್ಲಿ ಹೈದರಾಬಾದಿನ ನಿಜಾಮನ ಪ್ರತಿನಿಧಿಯಾಗಿ ಬಂದಿದ್ದ ಮೀರ್‌ಆಲಮನೂ ಮತ್ತೊಂದು ಕಡೆ ಚಕ್ರವರ್ತಿಯವರ ಪ್ರತಿನಿಧಿಯಾಗಿ ಬಂದಿದ್ದ ಜನರಲ್ ಹ್ಯಾರಿಸ್ ಸಾಹೇಬನೂ ನಿಂತು ಮಹಾರಾಜರಿಗೆ ಹಸ್ತಲಾಘವ ಕೊಡುತ್ತಾ ಅವರನ್ನು ದಿವ್ಯರತ್ನ ಸಿಂಹಾಸನದ ಮೇಲೆ ಏರಿಸಿ ಕುಳ್ಳಿರಿಸಿದರು. ಖಾಸಾ ಚಾಮರಾಜ ಒಡೆಯರ ಮಕ್ಕಳಾದ ನಂಜರಾಜವಡೆಯರು ಮುಮ್ಮಡಿ ಕೃಷ್ಣರಾಜ ಒಡೆಯರೆಂಬ ನಾಮಧೇಯದಿಂದ ಹೀಗೆ ರಾಜ್ಯಾಭಿಷೇಕವನ್ನು ಹೊಂದಿ ರತ್ನಸಿಂಹಾಸನಾರೂಢರಾಗಿ ಪ್ರಕಾಶಿಸಿದರು.

B. Venkataraman

ಉ ಪ ಸಂ ಹಾ ರ

ಮಹಾಮಾತೃ ಶ್ರೀ ಲಕ್ಷ್ಮಮ್ಮಣ್ಣಿಯವರು ಇಮ್ಮಡಿ ಕೃಷ್ಣರಾಜ ಒಡೆಯರೊಂದಿಗೆ ಪರಿಣೀತರಾದ ತರುವಾಯ ೫೧ ವರ್ಷಕಾಲ ಜೀವಿಸಿ ಇಹ ಲೋಕ ವ್ಯಾಪಾರ ನಿರತರಾಗಿದ್ದರು. ಆದರೆ ಈ ಐವತ್ತೊಂದು ವರ್ಷಗಳಲ್ಲಿ ರಾಜಜೀವನದಲ್ಲಿ ಪತಿಯೊಂದಿಗೆ ಸಂಸಾರ ಸುಖವನ್ನನುಭವಿಸಿದುದು ಏಳು ವರ್ಷಕಾಲ ಮಾತ್ರ. ಮಿಕ್ಕ ನಾಲ್ವತ್ನಾಲ್ಕು ವರ್ಷಕಾಲವನ್ನೂ ವೈಧವ್ಯಾನುಭವದಲ್ಲೇ ಕಳೆದ ಈಕೆಯು, ಅಗಾಧ ಕಷ್ಟ ತಾಪತ್ರಯಗಳನ್ನೂ ಮನಃಕ್ಲೇಶವನ್ನೂ ಅನುಭವಿಸಿದರು. ರಾಜ್ಯಕ್ಕೆ ಬಾಧ್ಯಸ್ಥರಾದ ಸಪತ್ನೀಪುತ್ರರೀರ್ವರೂ ಬಾಲ್ಯದಲ್ಲೇ ಮೃತರಾಗಲು, ಪರಾಕ್ರಾಂತವಾಗುತ್ತಿದ್ದ ಅರ್ಸೀಯರಾಜ್ಯದ ಬಾಧ್ಯತೆಯನ್ನು ತಮ್ಮ ವಂಶಕ್ಕೇ ದಕ್ಕಿಸಿಕೊಳ್ಳುವ ಕಾರ್ಯದಲ್ಲಿ ಈ ಮಹಾರಾಣಿಯವರು ಪ್ರದರ್ಶಿಸಿದ ಧೈರ್ಯಸಾಹಸ ದೂರಾಲೋಚನೆಗಳು ಪ್ರಶಂಸಾರ್ಹವಾಗಿವೆ.

ಮಹಾರಾಣಿಯವರ ಪ್ರಕೃತಿಯು ಬಹು ಉದಾರವಾದುದು. ಅವರ ಧೈರ್ಯವೂ ಅಪಾರವಾದುದು. ಇದನ್ನು ತಿಳಿಸಲು ಅರಮನೆಯಲ್ಲಿ ಜರುಗಿದ ಒಂದು ಸಂಗತಿಯನ್ನು ಇಲ್ಲಿ ಉದಹರಿಸಬಹುದಾಗಿದೆ. ೧೮೦೬ನೆಯ ಸಂ||ದಲ್ಲಿ ರಾಜಧಾನಿಯಲ್ಲಿ ಸಿಡುಬುರೋಗವು ವ್ಯಾಪಿಸಿ, ಮಹಾರಾಜ ಖಾಸಾ ಚಾಮರಾಜ ಒಡೆಯರು ಆ ರೋಗಕ್ಕೆ ತುತ್ತಾದರು. ಅತ್ಯಲ್ಪಜ್ಞ ಸ್ಥಿತಿಯಲ್ಲಿದ್ದ ಆ ಹತವ್ಯಾಧಿಯ ಬಾಧೆಯನ್ನು ಸಹಿಸಲಾರದೆ, ಜನಗಳು ಅತಿಶಯ ತಳಮಳಗೊಳ್ಳತೊಡಗಿದರು. ಯಾವ ಕ್ಷಣದಲ್ಲಿ ಯಾರಿಗೆ ಆ ರೋಗಬಾಧೆಯು ಪ್ರಾಪ್ತವಾಗಿ ಏನು ಅನಾಹುತ ಸಂಭವಿಸುವುದೋ ಎಂದು ಎಲ್ಲರೂ ಭಯಭ್ರಾಂತರಾಗಿದ್ದರು. ಆಗ ಈ ದೇಶದಲ್ಲಿ ರೆಸಿಡೆಂಟಾಗಿದ್ದ ಮೇಜರ್ ವಿಲ್ಕ್ಸ್ ಎಂಬಾತನು, – 'ಇಂಗ್ಲೆಂಡು ದೇಶದ ಒಬ್ಬಾನೊಬ್ಬ ವೈದ್ಯನು, ಸಿಡುಬನ್ನು ಕೃತ್ರಿಮ ಸಾಧನದಿಂದ ಹಬ್ಬಿಸಿ, ಆ ರೋಗದ ಪ್ರಾಬಲ್ಯವನ್ನು ತಗ್ಗಿಸಿ, ಜನರಿಗೆ ಆರೋಗ್ಯವನ್ನುಂಟುಮಾಡುವ ಉಪಾಯವನ್ನು ಕಂಡು ಹಿಡಿದಿದ್ದಾನೆ' ಎಂಬ ವಾರ್ತೆಯನ್ನು ಶ್ರೀ ಲಕ್ಷ್ಮಮ್ಮಣ್ಣಿಯವ... ರಿಗೆ ತಿಳಿಸಿದನು. ಅದನ್ನು ಕೇಳಿದ ಮಹಾರಾಣಿಯವರು, ಆ ಭ... ವಾದ ರೋಗಬಾಧೆಯನ್ನು ಅಷ್ಟು ಸುಲಭವಾಗಿ ಪರಿಹರಿಸುವ ಉ...



ನಡೆಯಿಸಿದ ರಾಣೀ ಭವಾನಿಯೂ, ನಮ್ಮ ಮೈಸೂರು ಸಂಸ್ಥಾನದ ಆರ್ಷೇ
ಯ ರಾಜ … ದನ್ನು
ಸಂರಕ್ಷಿ … ಮ್ಮಣ್ಣಿ
ಯವರೂ … ರು.
ಪ್ರಕೃತ … ಟ್ಟು
ತನ್ನ ಸ … ರ್ಗಸು
ಧಾಂಬ … ರ್ಯ
ಸಾಹಸ … ರೋ
ಮಣಿಯ … ಹವೇ
ನಿದೆ! ಐ … ತ್ರೀ
ಲಕ್ಷ್ಮ … ದದ
ಮೇಲೂ … ಸಗಳ
ನ್ನೂ ಉ … ದೃಢ
ಚಿತ್ತತೆ …

A letter of grateful acknowledgement by the widow of Chikka Krishna Raja or ... Krishna Raja, and the widow of Chama...ja ... British Darbar, on 24th June 1799.

'*Your having conferred on our chil... government of My... Nagar and their depe... ndencies, and a... Purnaiya to be the Diwan, has afforded us the greatest hap... ness. Forty years have elapsed since our government ceased. Now you have fav... our boy with the government of this count... and nominated Purnaiya to be his Diwan. We shall, while the sun and the moon conti... nue, commit no offence against your govern... ment. We shall at all times consider our selves as under your Protection and order... Your having established us must for ever be fresh in the memory of our posterity from one generation to another Our offspr... never forget an attachment to your go... ment on whose support we shall depend.*

(Sd) Lachhmi Amma...

" Dewaji